# ಶಾಲಾ ಶಿಕ್ಷಣ ಮತ್ತು ಶಿಕ್ಷಕರು

## ಸಮಕಾಲೀನ ಸಂವಾದ

Azim Premji University



ನವಕರ್ನಾಟಕ ಪ್ರಕಾಶನದ ೫೫೯೬ನೇ ಪ್ರಕಟಣೆ

# ಶಾಲಾ ಶಿಕ್ಷಣ ಮತ್ತು ಶಿಕ್ಷಕರು

## ಸಮಕಾಲೀನ ಸಂವಾದ

ಗೌರವ ಪ್ರತಿ
ನವಕರ್ನಾಟಕ ಪ್ರಕಾಶನ

Azim Premji University

ನವಕರ್ನಾಟಕ ಪ್ರಕಾಶನ

# ಮಗುವಿನ ಕಲಿಕೆಯಲ್ಲಿ ಶಿಕ್ಷಕರು ವಹಿಸಬಹುದಾದ ವಿಭಿನ್ನ ಪಾತ್ರಗಳು ಮತ್ತು ಅವುಗಳ ಮಹತ್ವ

*– ರೇಖಾ ಚವ್ಹಾಣ್*

## ಪ್ರಬಂಧದ ಸಾರಾಂಶ

ಇಂದಿನ ನಮ್ಮ ಸರ್ಕಾರಿ ಶಾಲೆಗಳಲ್ಲಿ ಕಲಿಯುವ ಬಹುತೇಕ ಮಕ್ಕಳು ಆರ್ಥಿಕ ಮತ್ತು ಸಾಮಾಜಿಕವಾಗಿ ಅತ್ಯಂತ ಅವಕಾಶವಂಚಿತ ಕೌಟುಂಬಿಕ ಹಿನ್ನೆಲೆಗಳಿಂದ ಬಂದವರಾಗಿರುತ್ತಾರೆ. ಅನೇಕರ ಮನೆಗಳಲ್ಲಿ ಕಲಿಕೆಗೆ ಪೂರಕ ವಾತಾವರಣ ಇಲ್ಲವಾಗಿರುತ್ತದೆ. ಅಲ್ಲದೆ ಪೋಷಕರ ಪ್ರೀತಿ ಕಾಳಜಿಗಳಿಂದ ಕೂಡ ಅವರು ಹೊರತಾಗಿರುತ್ತಾರೆ. ಆ ಮಕ್ಕಳನ್ನೂ ತರಗತಿ ಪ್ರಕ್ರಿಯೆಯಲ್ಲಿ ಒಳಗೊಂಡು ಅವರಿಗೆ ವಿಶೇಷ ಗಮನವನ್ನು ನೀಡಬೇಕಾದ ಗುರುತರ ಜವಾಬ್ದಾರಿ ಶಿಕ್ಷಕರದ್ದಾಗಿರುತ್ತದೆ. ಇಂತಹ ಕೆಲವು ಶಾಲೆಗಳ ಮತ್ತು ಶಿಕ್ಷಕರ ಕ್ಷೇತ್ರಾಧ್ಯಯನವನ್ನು ಕೈಗೊಂಡು ಶಿಕ್ಷಕರ ಆಚರಣೆಗಳು ಸಂವೇದನಾಶೀಲವಾಗಿದ್ದವೇ? ವಿವಿಧ ಹಿನ್ನೆಲೆಗಳ ಮಕ್ಕಳನ್ನು ಸಂಪನ್ಮೂಲವಾಗಿ ಬಳಸಿಕೊಂಡಿದ್ದಾರೆಯೇ? ಆ ಎಲ್ಲ ಮಕ್ಕಳ ಕಲಿಕೆಯನ್ನು ಅನುಕೂಲಿಸುತ್ತಿದ್ದಾರೆಯೇ? ಎಂಬಂತಹ ಸಮತೆಗೆ ಸಂಬಂಧಿಸಿದ ಬಹುಮುಖ್ಯ ಆಯಾಮಗಳನ್ನು ಈ ಪ್ರಬಂಧ ಪರಿಶೋಧಿಸುತ್ತದೆ.

## ಪೀಠಿಕೆ

'ಶಿಕ್ಷಣ' ಎಂದೊಡನೆ ನಮ್ಮೆಲ್ಲರ ಕಣ್ಮುಂದೆ ಮೂಡುವ ಮುಖ್ಯವಾದ ಚಿತ್ರಣ ಒಂದು ಕಲಿಕಾರ್ಥಿಯದು, ಮತ್ತೊಂದು ಶಿಕ್ಷಕರದ್ದು. ಶೈಕ್ಷಣಿಕ ಉದ್ದೇಶವನ್ನು ಈಡೇರಿಸುವುದರಲ್ಲಿ ಶಿಕ್ಷಕರು ನಿರ್ಣಾಯಕ ಪಾತ್ರ ವಹಿಸುತ್ತಾರೆ. ಪ್ರಸಕ್ತ ಸನ್ನಿವೇಶದಲ್ಲಿ ಶಿಕ್ಷಕರ ಬೆಳವಣಿಗೆಗೆ ನೀಡುತ್ತಿರುವ ಆದ್ಯತೆಯು ಸಂಶೋಧನಾ ಅವಕಾಶಗಳನ್ನು, ವಿಭಿನ್ನ ನೆಲೆಯಲ್ಲಿ ಆಲೋಚಿಸುವ ಅವಕಾಶಗಳನ್ನು ಹೆಚ್ಚಿಸಿದೆ. ಪ್ರಸ್ತುತ ಕಾಲಮಾನದಲ್ಲಿ ಶಿಕ್ಷಕರ ಪಾತ್ರ ಏನಿರಬೇಕು ಹಾಗೂ ಒಬ್ಬ ಶಿಕ್ಷಕ ಹೇಗಿರಬೇಕು ಎಂಬ ಆಲೋಚನೆಯನ್ನು ಕಟ್ಟಿಕೊಡುವ ಪ್ರಯತ್ನವನ್ನು ಈ ಪ್ರಬಂಧ ನಡೆಸುತ್ತದೆ.

## ಅಧ್ಯಯನದ ಉದ್ದೇಶಗಳು

ಶಿಕ್ಷಣ ಎಂದರೇನು ? ಮರಿಯ ಮಾಂಟೊಸರಿಯವರು ಹೇಳಿರುವಂತೆ ಮಗುವಿನಲ್ಲಿ ಕಲಿಯುವ ನೈಸರ್ಗಿಕ ಆಕಾಂಕ್ಷೆಯನ್ನು ಸಕ್ರಿಯಗೊಳಿಸುವುದು ಶಿಕ್ಷಣದ

ಗುರಿಯಾಗಿದ್ದಲ್ಲಿ, ಈ ಮಹತ್ವದ ಗುರಿಯನ್ನು ಸಾಧ್ಯವಾಗಿಸುವ ಶಿಕ್ಷಕರ ಪಾತ್ರವೇನಿರಬೇಕು ? ಶಿಕ್ಷಕರ ಪಾತ್ರ ಕೇವಲ ಪಠ್ಯಕ್ರಮದಲ್ಲಿರುವ ಮಾಹಿತಿಯನ್ನು ವರ್ಗಾಯಿಸುವುದಕ್ಕೆ ಸೀಮಿತಗೊಳ್ಳುವುದೆ? ಅಥವಾ ಮಗು ಒಂದು ವಿಷಯವನ್ನು ಸಂಸ್ಕರಿಸಿ ಗ್ರಹಿಸುವಂತಹ ಹಾಗೂ ಒಬ್ಬ ನಿರಂತರ ಕಲಿಕಾದಾರನಾಗಲು ತನ್ನ ಕಲಿಕೆಯನ್ನು ಜೀವನದ ನೈಜ ಸನ್ನಿವೇಶಗಳಿಗೆ ಅಳವಡಿಸಿಕೊಳ್ಳುವಂತಹ ಕೌಶಲಭರಿತ ವ್ಯಕ್ತಿಯಾಗಿ ರೂಪಾಂತರಗೊಳ್ಳಲು ಅನುಕೂಲ ಮಾಡಿಕೊಡುವುದೆ? ಶಿಕ್ಷಕರಾಗುವುದಕ್ಕೆ ವಿಶಿಷ್ಟವಾದ ಕೌಶಲಗಳು, ಅನುಭವಗಳು ಹಾಗೂ ಮನೋವೃತ್ತಿಯ ಅವಶ್ಯಕತೆ ಇರುತ್ತವೆಯೇ? ಇಂತಹ ಪ್ರಶ್ನೆಗಳಿಗೆ ಕ್ಷೇತ್ರ ಭೇಟಿ, ಅಲ್ಲಿ ನಡೆಸಿದ ಪ್ರಕ್ರಿಯೆಗಳಿಂದಾದ ಅನುಭವಗಳು ಹಾಗೂ ಹಲವು ಶಿಕ್ಷಣ ತಜ್ಞರು ಪ್ರತಿಪಾದಿಸಿರುವ ವಿಚಾರಗಳ ಆಧಾರದ ಮೇಲೆ ಉತ್ತರಗಳನ್ನು ಕಂಡುಕೊಳ್ಳುವ ಪ್ರಯತ್ನವನ್ನು ಮಾಡಲಾಗಿದೆ.

## ಬಳಸಿದ ವಿಧಾನ : ಕ್ಷೇತ್ರ ಭೇಟಿ : ಗೊಡಬನಾಳ ಶಾಲೆಯ ಯಶವಂತ

ನನ್ನ ವೃತ್ತಿಯ ಭಾಗವಾಗಿ ಚಿತ್ರದುರ್ಗ ಜಿಲ್ಲೆಯ ಗೊಡಬನಾಳ ಸರ್ಕಾರಿ ಶಾಲೆಗೆ ಭೇಟಿ ಕೊಡುವ ಅವಕಾಶ ನನಗೆ ದೊರೆಯಿತು. ಅಲ್ಲಿ ತರಗತಿಯ ಪ್ರಕ್ರಿಯೆಯನ್ನು ವೀಕ್ಷಿಸುವುದು ನನ್ನ ಕಾರ್ಯವಾಗಿತ್ತು. ಅದೊಂದು 3, 4 ಹಾಗೂ 5ನೇ ತರಗತಿಯ ಮಿಶ್ರವಯೋಮಾನದ ಮಕ್ಕಳನ್ನು ಒಳಗೊಂಡಿದ್ದ ತರಗತಿಯಾಗಿತ್ತು. ಮಕ್ಕಳ ಗಮನ ನನ್ನೆಡೆಗೆ ಸೆಳೆಯದಿರುವಂತೆ ತರಗತಿಯ ಮೂಲೆಯೊಂದನ್ನು ಆಯ್ಕೆ ಮಾಡಿಕೊಂಡು ಕುಳಿತೆ. ಬೆಳಗಿನ ಪ್ರಾರ್ಥನೆಯ ನಂತರ ಮಕ್ಕಳೆಲ್ಲಾ ತರಗತಿಯೊಳಗೆ ಬಂದು ಒಂದು ದೊಡ್ಡ ವೃತ್ತಾಕಾರದಲ್ಲಿ ಕುಳಿತರು. ಶಾಂತ ಸ್ವಭಾವದ ಶಿಕ್ಷಕಿ ದೇವೀರಮ್ಮ ಮಕ್ಕಳೊಂದಿಗೆ ನೆಲದ ಮೇಲೆ ಕುಳಿತುಕೊಂಡು ಮಾತುಕತೆ ಆಡುವದರೊಂದಿಗೆ ಸ್ವಾಭಾವಿಕ ರೀತಿಯಲ್ಲಿ ತರಗತಿ ಆರಂಭಗೊಂಡಿತು. ನೀರನ್ನು ಎಲ್ಲೆಲ್ಲಿಂದ ಪಡೆಯಬಹುದು? ಎಂಬ ಪ್ರಶ್ನೆಗೆ ಮಕ್ಕಳು ತಾವು ತಮ್ಮದೇ ಅನುಭವಗಳ ಹಿನ್ನೆಲೆಯಲ್ಲಿ ನಲ್ಲಿ, ಕೈಪಂಪು, ಕೊರೆದ ಬಾವಿ, ನದಿ, ಕೆರೆ, ಬಾವಿ, ಹೊಂಡ, ತೊರೆ, ಸಮುದ್ರ ಇತ್ಯಾದಿ ಉತ್ತರಗಳನ್ನು ಹೇಳುವುದರೊಂದಿಗೆ ಮಾತುಕತೆಯು ಸಾಗಿತ್ತು. ಶಿಕ್ಷಕಿ ಎಲ್ಲವನ್ನೂ ಕೇಳಿಸಿಕೊಂಡರು. ನಲ್ಲಿಯು ನೀರಿನ ಮೂಲವೇ ಎಂಬ ಪ್ರಶ್ನೆಯನ್ನು ಮುಂದಿಟ್ಟರು. ಅರ್ಧದಷ್ಟು ಮಕ್ಕಳು ಹೌದು ಎಂದರೆ, ಇನ್ನರ್ಧದಷ್ಟು ಮಕ್ಕಳು ಇಲ್ಲವೆಂದು ಹೇಳಿದರು. ಆಗ ಎರಡೂ ರೀತಿಯಲ್ಲಿ ತಮ್ಮ ನಿಲುವನ್ನು ವ್ಯಕ್ತಪಡಿಸುತ್ತಿದ್ದ ಮಕ್ಕಳಿಗೆ ಸೂಕ್ತ ಸಮರ್ಥನೆಯೊಂದಿಗೆ ಸಾಬೀತುಪಡಿಸುವಂತೆ ನಿರ್ದೇಶನವನ್ನು ನೀಡುವುದರ ಮೂಲಕ ಮಕ್ಕಳ ನಡುವೆ ಪರಸ್ಪರ ಚರ್ಚೆಗೆ ಅನುವು ಮಾಡಿಕೊಟ್ಟರು. ಮಕ್ಕಳು ದೀರ್ಘ ಚರ್ಚೆಯ ನಂತರ ನಲ್ಲಿಯು ನೀರಿನ ಮೂಲವಲ್ಲ; ಬದಲಾಗಿ ನೀರಿನ ಮೂಲದಿಂದ ಬಳಕೆಗೆ ಅನುಕೂಲವಾಗುವಂತೆ ಮನೆ ಅಥವಾ ಗ್ರಾಮಗಳಿಗೆ ನೀರನ್ನು ರವಾನಿಸುವ ವ್ಯವಸ್ಥೆ ಎಂದು ಒಮ್ಮತಕ್ಕೆ ಬರುವಂತೆ ಚರ್ಚೆಯನ್ನು ಕ್ರೋಢೀಕರಿಸಿದರು.

ಅನಂತರ ಶಿಕ್ಷಕಿಯ ನಿರ್ದೇಶನದಂತೆ ಮಕ್ಕಳು ಚಿಕ್ಕ ಕಲಿಕಾ ಗುಂಪುಗಳಲ್ಲಿ

ವಿಭಾಗಗೊಂಡು, ಪ್ರತಿ ಗುಂಪೂ ಒಂದೊಂದು ಕಲಿಕಾ ಚಟುವಟಿಕೆಯಲ್ಲಿ ತೊಡಗಿತು. ತಮಗೆ ನೀಡಿದ್ದ ಕಾರ್ಯಗಳಲ್ಲಿ ತಲ್ಲೀನರಾಗಿದ್ದ ಮಕ್ಕಳ ಗುಂಪುಗಳ ನಡುವೆ ಒಂದೆಡೆ ತುಸು ಹೊತ್ತು ಕೂರುವುದೂ ಅಸಾಧ್ಯ ಕಾರ್ಯವಾಗಿದ್ದ ತುಂಟ ಕಂಗಳ ಯಶವಂತ ಎಂಬ ಹುಡುಗನನ್ನು ಕಂಡೆ. ಇವ ಕಪ್ಪೆಯಂತೆ ಕುಪ್ಪಳಿಸುತ್ತಾ, ಆ ಗುಂಪಿನಿಂದ ಈ ಗುಂಪಿಗೆ, ಈ ಗುಂಪಿನಿಂದ ಇನ್ನೊಂದು ಗುಂಪಿಗೆ ಸಾಗುತ್ತಿದ್ದ. ತಾನು ಹೋಗುತ್ತಿದ್ದ ಗುಂಪುಗಳಲ್ಲಿದ್ದವರನ್ನು ಮಾತನಾಡಿಸುತ್ತಾ ಕೆಲವು ಸಲಹೆಗಳನ್ನೂ ನೀಡುತ್ತಿದ್ದ. ಅಲ್ಲೊಬ್ಬಳ ಜಡೆಯನ್ನು ಎಳೆದ. ಅಯ್ಯೋ! ಇನ್ನೇನು ಅವರ ನಡುವೆ ದೊಡ್ಡ ಜಗಳವಾಗುವುದೇನೋ ಎಂದು ಗಾಬರಿಗೊಂಡೆ. ಆಶ್ಚರ್ಯವೆಂದರೆ ಅವನನ್ನು ಚೆನ್ನಾಗಿ ಅರಿತಿದ್ದ ಹುಡುಗಿ ಮರುಸ್ಪಂದಿಸುವ ಬದಲಾಗಿ ನಿರ್ಲಕ್ಷಿಸಿ, ತನ್ನ ಚಟುವಟಿಕೆಗೆ ಮರಳಿದಳು. ಅವನ ವರ್ತನೆಯ ಬಗ್ಗೆ ಮಕ್ಕಳು ಪರಿಚಿತರಾಗಿದ್ದಂತೆ ಕಂಡುಬಂದಿತು. ಅವನು ತಮ್ಮ ಗುಂಪಿನವನಲ್ಲನಾದರೂ ಅವನ ಸಲಹೆಯನ್ನು ಧಾರಾಳವಾಗಿ ಸ್ವೀಕರಿಸುತ್ತಿದ್ದರು ಹಾಗೂ ಅಳವಡಿಸಿಕೊಳ್ಳುತ್ತಿದ್ದರು. ಶಿಕ್ಷಕಿ ಅವಶ್ಯಕತೆಯ ಮೇರೆಗೆ ಪ್ರತಿ ಗುಂಪಿನ ಪ್ರಶ್ನೆಗಳಿಗೆ ಸ್ಪಂದಿಸುತ್ತಾ, ಆ ಗುಂಪು ತನ್ನ ಕಾರ್ಯವನ್ನು ಸ್ವತಂತ್ರವಾಗಿ ನಿರ್ವಹಿಸಲು ಅನುಕೂಲ ಮಾಡಿಕೊಡುತ್ತಿದ್ದರು. ಆ ನಂತರ ಅವನಿದ್ದ ಗುಂಪು ಗ್ರಾಮದಲ್ಲಿ ಎಷ್ಟು ಮನೆಗಳಲ್ಲಿ ನಲ್ಲಿಗಳಿವೆ, ಎಷ್ಟು ಬೀದಿಗಳಲ್ಲಿ ಕೈ ಪಂಪುಗಳಿವೆ ಎಂಬ ಸಮೀಕ್ಷೆ ಕೈಗೊಳ್ಳಲು ತೆರಳಿತು. ಮಕ್ಕಳು ಮನೆಮನೆಯ ಬಳಿ ಹೋಗಿ ಹಿರಿಯರಿಂದ ಈ ಬಗ್ಗೆ ಮಾಹಿತಿ ಸಂಗ್ರಹಿಸುವಾಗ, ಅವನು ಮಾತ್ರ ಈ ವಿಷಯಕ್ಕೆ ಸಂಬಂಧವೇ ಇಲ್ಲದಂತಿದ್ದ. ಆದರೆ ಅವನ ಕಂಗಳು ಮಾತ್ರ ಪ್ರಾಣಿ, ಪಕ್ಷಿಗಳ ಮೇಲಿತ್ತು. ಈ ನಾಯಿ ನಿಮ್ಮದೇ? ನಿಮ್ಮ ಮನೆಯಲ್ಲಿ ಹಸುಗಳಿವೆಯೇ? ಎಂಬಂತಹ ಪ್ರಶ್ನೆಗಳನ್ನು ಕೇಳುತ್ತಿದ್ದ. ಗುಂಪಿನ ಇತರೆ ಮಕ್ಕಳು ಮಾತ್ರ ಅವನು ಗುಂಪಿನಿಂದ ಪ್ರತ್ಯೇಕಗೊಳ್ಳದಂತೆ ಎಚ್ಚರ ವಹಿಸುತ್ತಿದ್ದರು. ಯಶವಂತನ ವರ್ತನೆಯು ಹೊವರ್ಡ್ ಗಾರ್ಡ್‌ನರ್ ಪ್ರತಿಪಾದಿಸಿರುವ 9 ರೀತಿಯ ಬುದ್ಧಿವಂತಿಕೆಗಳಲ್ಲಿ (Multiple Intelligences) ಎಂಟನೆಯದಾದ ನೈಸರ್ಗಿಕ ಬುದ್ಧಿವಂತಿಕೆಯ ಕಲಿಕಾ ಶೈಲಿಯನ್ನು (Naturalist intelligence - ability to recognize and categorize plants, animals and other objects in nature) ಜ್ಞಾಪಿಸುತ್ತಿತ್ತು.

## ಬಲ್ಲಾಪಟ್ಟಣ ಶಾಲೆಯ ವಿನಾಯಕ

ಈ ಸನ್ನಿವೇಶದಲ್ಲಿ ನನಗೆ ತಕ್ಷಣ ನೆನಪಿಗೆ ಬಂದದ್ದು ಬಲ್ಲಾಪಟ್ಟಣ ಸರ್ಕಾರಿ ಕಿರಿಯ ಪ್ರಾಥಮಿಕ ಶಾಲೆಯ ವಿನಾಯಕ. ಈ ಶಾಲೆಗೆ 2016ರಲ್ಲಿ ಭೇಟಿಕೊಟ್ಟು 1ರಿಂದ 3ನೇ ತರಗತಿಯ ಕಲಿಕಾ ಪ್ರಕ್ರಿಯೆಯನ್ನು ವೀಕ್ಷಿಸುತ್ತಿದ್ದಾಗ ಎಲ್ಲಾ ಮಕ್ಕಳು ಕಲಿಕೆಯಲ್ಲಿ ಭಾಗವಹಿಸಿದ್ದರೆ ಮುದ್ದಾದ, ದುಂಡು ಕಂಗಳ ಮುಗ್ಧ ವಿನಾಯಕ ತರಗತಿಯ ಮೂಲೆಯೊಂದರಲ್ಲಿ ಸ್ಲೇಟ್ ಹಿಡಿದು 'ಅ ಆ' ತಿದ್ದುತ್ತಿದ್ದ! ಶಿಕ್ಷಕಿ ಹಾಗೂ ಸಹಪಾಠಿಗಳ ವರ್ತನೆಗಳಿಂದ ಯಾವ ರೀತಿ ವಿನಾಯಕ ಮೂಲೆಗುಂಪಾಗಿದ್ದ ಎಂಬುದು ಮೇಲ್ನೋಟಕ್ಕೆ ತಿಳಿಯಿತು. ಯಾರಿಗೂ ಬೇಡವಾದ ಹುಡುಗನಾಗಿದ್ದ

ಅವನ ಮೇಲೆ ಶಿಕ್ಷಕಿ ಹಲವಾರು ದೂರುಗಳನ್ನು ಹೊಂದಿದ್ದರು – "ಅವನೊಬ್ಬ ಎಲ್ಲರ ವಸ್ತುಗಳನ್ನು ಕದಿಯುವ ಮಗು, ಎಲ್ಲರಿಗೂ ತೊಂದರೆ ಕೊಡುವವನು", "ಕಲಿಕಾ ಸಮಸ್ಯೆ ಎದುರಿಸುತ್ತಿರುವ, ಎರಡು ವರ್ಷ ಕಳೆದರೂ ಒಂದಕ್ಷರ ಕಲಿಯದ ಮಗು". ಮೇಲ್ನೋಟಕ್ಕೆ ಅವರ ದೂರುಗಳಲ್ಲಿ ನಿಜಾಂಶವಿಲ್ಲ ಎಂದು ನನಗೆ ತಿಳಿದುಬಂದರೂ, ಪ್ರತ್ಯುತ್ತರ ನೀಡುವ ಸ್ಥಿತಿಯಲ್ಲಿ ನಾನಿರಲಿಲ್ಲ. ಆದರೆ ಅವನೊಂದಿಗೆ, ಸಹಪಾಠಿಗಳೊಂದಿಗೆ ಮಾತನಾಡಿ ಶಿಕ್ಷಕಿಯೊಂದಿಗೆ ಆಳವಾಗಿ ವಿಚಾರ ಮಾಡಿ ನಂತರ ಆತನೊಂದಿಗೆ ಸಮಯ ಕಳೆದ ನಂತರ "ಆತ ಒಬ್ಬ ಅದ್ಭುತ ಮಗು" ಹಾಗೂ ಅವನಿಗೆ ಬೇಕಾಗಿರುವುದೇನೋ ಈ ಕಲಿಕಾ ಪರಿಸರದಲ್ಲಿ ದೊರೆಯುತ್ತಿಲ್ಲ ಎಂಬುದು ತಿಳಿಯಿತು. ಅವನ ಕಲಿಕೆಗೆ ಅನುಕೂಲ ಮಾಡಿಕೊಡುವ ನನ್ನ ಪ್ರಯತ್ನ ಅವನು ಎಲ್ಲರಂತೆ ಕಲಿಯಬಲ್ಲನೆಂದು ಸಾಬೀತುಪಡಿಸಿತು. ವಿನಾಯಕನು ತನಗೆ ಏನು ಬೇಕು, ಅದನ್ನು ಎಲ್ಲಿಂದ ಪಡೆಯಬೇಕು ಎಂದು ಕಲಿತಿದ್ದನೇ ಹೊರತು, ಅದನ್ನು ಪುನಃ ಅದೇ ಜಾಗದಲ್ಲಿ ಇಡುವುದು ಕಲಿತಿರಲಿಲ್ಲ. ಅವನಿಗೆ ಪೆನ್ಸಿಲ್ ಬೇಕು ಎಂದಾಗ ಅವನ ಸಹಪಾಠಿಗಳ ಬ್ಯಾಗಿನಿಂದ ಎತ್ತಿಕೊಂಡು ಬರೆದು, ಅದನ್ನು ತಾನು ಕುಳಿತಿದ್ದ ಜಾಗದಲ್ಲಿಯೇ ಬಿಟ್ಟುಬಿಡುತ್ತಿದ್ದ. ಅವನೊಬ್ಬ 'ಕಳ್ಳ ಮಗು' ಎಂದು ಹಣೆಪಟ್ಟಿ ಕಟ್ಟುವ ಬದಲಾಗಿ, ಶಿಕ್ಷಕಿ ಅವನಿಗೆ ಪುನಃ ಅದೇ ಜಾಗದಲ್ಲಿ ವಸ್ತುಗಳನ್ನು ಇಡುವುದು ಮತ್ತು ತನ್ನ ಬಳಿ ಇಲ್ಲದ ವಸ್ತುಗಳು ಬೇಕಾದಾಗ ಸ್ನೇಹಿತರಿಂದ ಕೇಳಿ ಪಡೆಯುವುದನ್ನು ಹೇಳಿಕೊಡಬೇಕಿತ್ತು. ಅಷ್ಟರ ಮಟ್ಟಿನ ಅರ್ಥೈಸುವಿಕೆ ಅವನಿಗಿತ್ತು. ಅಲ್ಲಿ ವಿನಾಯಕನಿಗೆ ಕಲಿಕಾ ಸಮಸ್ಯೆಯಲ್ಲ, ಬದಲಾಗಿ ಆ ಹುಡುಗನಂತಹ ಮಕ್ಕಳನ್ನು ಅರ್ಥೈಸಿಕೊಂಡು, ಕಲಿಸುವ ಸಾಮರ್ಥ್ಯದ ಕೊರತೆ ಶಿಕ್ಷಕಿಗೆ ಇದೆ ಎಂಬುದು ತಿಳಿಯಿತು. ಬೆಳೆಯುವ ಸಿರಿಯನ್ನು ಮೊಳಕೆಯಲ್ಲಿ ಚಿವುಟುವ ಪ್ರಯತ್ನ ಅಲ್ಲಿ ನಡೆಯುತ್ತಿತ್ತೇ ಹೊರತು ಬೆಳವಣಿಗೆಗೆ ಪೂರಕವಾದಂತಹ ಪೌಷ್ಟಿಕ ಸತ್ವವನ್ನು ಉಣಿಸುವ ಪ್ರಯತ್ನ ಕಾಣಲಿಲ್ಲ.

## ಕಾಡಂಕನಹಳ್ಳಿ ಶಾಲೆಯ ತರಗತಿ ಪ್ರಕ್ರಿಯೆ

ಕಾಡಂಕನಹಳ್ಳಿ ಚನ್ನಪಟ್ಟಣ ತಾಲ್ಲೂಕಿನ ಒಂದು ಪುಟ್ಟ ಗ್ರಾಮ. ಆ ಶಾಲೆಯಲ್ಲಿ ನಾನೊಂದು ದಿನ ಕಳೆದ ಅದ್ಭುತ ಅನುಭವವಿದು. ನಾಲ್ಕು ಮತ್ತು ಐದನೆಯ ತರಗತಿಯ ಮಕ್ಕಳೆಲ್ಲಾ 10 ಗಂಟೆಗೆ ತರಗತಿಯೊಳಗೆ ಬಂದು ವೃತ್ತಾಕಾರದಲ್ಲಿ ಕುಳಿತರು. ಶಿಕ್ಷಕ ಶಿವಕುಮಾರ್ ಮಕ್ಕಳೊಂದಿಗೆ ಸಾಮಾನ್ಯ ಮಾತುಕತೆಯೊಂದಿಗೆ ತರಗತಿಯನ್ನು ಆರಂಭಿಸಿದರು. "ನಮ್ಮ ಗ್ರಾಮದಲ್ಲಿ ಏನೆಲ್ಲಾ ಇವೆ?" ಎಂಬ ಪ್ರಶ್ನೆಗೆ ಮಕ್ಕಳು "ಮನೆಗಳು, ಪ್ರಾಣಿಗಳು, ಜನ, ಆಸ್ಪತ್ರೆ, ಗ್ರಾಮ ಪಂಚಾಯಿತಿ ಕಚೇರಿ, ರಸ್ತೆ, ನ್ಯಾಯ ಬೆಲೆ ಅಂಗಡಿ, ಬಸ್ಸು ನಿಲ್ದಾಣ, ಪೊಲೀಸ್ ಠಾಣೆ, ಆಟದ ಮೈದಾನ..." ಹೀಗೆ ಹೇಳುತ್ತಿದ್ದಂತೆ ಶಿಕ್ಷಕರು ಇವೆಲ್ಲವನ್ನೂ ಕಪ್ಪು ಹಲಗೆಯ ಮೇಲೆ ಬರೆದರು. "ಆಸ್ಪತ್ರೆ, ಗ್ರಾಮ ಪಂಚಾಯಿತಿ ಕಚೇರಿ, ರಸ್ತೆ, ನ್ಯಾಯ ಬೆಲೆ ಅಂಗಡಿ, ಬಸ್ಸು ನಿಲ್ದಾಣ, ಪೊಲೀಸ್ ಠಾಣೆ, ಆಟದ ಮೈದಾನ ಇವೆಲ್ಲಾ ಏನು ಎಂದು ನಿಮಗೆ ತಿಳಿದಿದೆಯೇ?" ಎಂಬ ಪ್ರಶ್ನೆಯನ್ನು ಮಕ್ಕಳ ಮುಂದಿಟ್ಟರು. ಮಕ್ಕಳು ಹೇಳಲು ಪ್ರಯತ್ನಿಸಿದರೂ ಸರಿಯಾದ

ಪದ ತಿಳಿದಿರಲಿಲ್ಲ. ಆಗ ಶಿಕ್ಷಕರು ಅವುಗಳನ್ನು "ಸಾರ್ವಜನಿಕ ಆಸಿ" ಎಂದು ಕರೆಯುವರು ಎನ್ನುತ್ತಾ, "ಅವುಗಳನ್ನು ಏಕೆ ಸಾರ್ವಜನಿಕ ಆಸ್ತಿ ಎನ್ನುತ್ತಾರೆ?" ಎಂಬ ಪ್ರಶ್ನೆಯನ್ನು ಮಕ್ಕಳ ಮುಂದಿಟ್ಟರು. "ಅವುಗಳನ್ನು ಎಲ್ಲಾ ಜನರೂ ಬಳಕೆ ಮಾಡಲು ಇರುವುದರಿಂದ ಅವುಗಳಿಗೆ ಹಾಗೆ ಕರೆಯುವರು" ಎಂಬ ಉತ್ತರವನ್ನು ತಮ್ಮದೇ ಆದ ಪದಗಳಲ್ಲಿ ನೀಡಿದರು. ನಂತರ "ಪೊಲೀಸ್ ಠಾಣೆಗೆ ಹೋದಾಗ ನಾವು ಯಾರನ್ನು ಭೇಟಿಯಾಗುತ್ತೇವೆ?" ಎಂಬಂತಹ ಪ್ರಶ್ನೆಗಳನ್ನು ಕೇಳುವುದರ ಮೂಲಕ ವಿವಿಧ ವೃತ್ತಿಗಳ ಹೆಸರುಗಳನ್ನು ಮಕ್ಕಳಿಂದಲೇ ಹೇಳಿಸಿದರು. ಯಾವ ಹೆಸರುಗಳನ್ನು ಮಕ್ಕಳು ಹೇಳಲು ಸಾಧ್ಯವಾಗಲಿಲ್ಲವೋ ಅಂತಹ ಹೆಸರುಗಳನ್ನು ಶಿಕ್ಷಕರು ಹೇಳುತ್ತಾ, ಅವರ ಕಲಿಕೆಗೆ ಅನುಕೂಲ ಮಾಡಿಕೊಟ್ಟರು. ಆ ನಂತರ ಸಾಕಷ್ಟು ವೃತ್ತಿಗಳ ವ್ಯಕ್ತಿಗಳನ್ನು ಹೊಂದಿರುವಂತಹ ಘಟನೆಯನ್ನು ವಿವರಿಸಿ, ಆ ಘಟನೆಯಲ್ಲಿ ಹಾದು ಹೋದ ವೃತ್ತಿಗಳ ಹೆಸರುಗಳನ್ನು ಮಕ್ಕಳು ಮರುನೆನಪಿಸಿಕೊಳ್ಳಲು ಅನುಕೂಲ ಮಾಡಿಕೊಟ್ಟರು. ಪರಿಕಲ್ಪನೆಯ ಬಗ್ಗೆ ಇನ್ನಷ್ಟು ಆಳವಾದ ಅರ್ಥೈಸುವಿಕೆಗೆ ತೊಡಗಿಕೊಳ್ಳುವುದಕ್ಕಾಗಿ ಮಕ್ಕಳನ್ನು ಮೂರು ಚಿಕ್ಕ ಗುಂಪುಗಳಲ್ಲಿ ವಿಂಗಡಿಸಿದರು. ಒಂದೊಂದು ಗುಂಪಿಗೂ ಒಂದೊಂದು ಚಟುವಟಿಕೆಯನ್ನು ಆಯೋಜಿಸಿದ್ದರು. ಅದರಂತೆ ಒಂದೊಂದು ಗುಂಪು ಒಂದೊಂದು ಸಾರ್ವಜನಿಕ ಆಸ್ತಿಯನ್ನು ಆಯ್ಕೆ ಮಾಡಿಕೊಂಡು ಅದರ ಬಗ್ಗೆ ಸಾಕಷ್ಟು ವಿಷಯಗಳನ್ನು ಸಂಗ್ರಹಿಸಬೇಕಿತ್ತು. ಇದಕ್ಕಾಗಿ ಶಿಕ್ಷಕರು ಪೂರ್ವ ತಯಾರಿ ಮಾಡಿಕೊಂಡಿದ್ದರು. ಗ್ರಾಮ ಪಂಚಾಯಿತಿ ಅಧ್ಯಕ್ಷರ ಮನೆಗೆ ಭೇಟಿ ನೀಡಿ, ಆ ದಿನ ಮಕ್ಕಳು ಬರುವುದಾಗಿಯೂ, ಅವರಿಗೆ ಪಂಚಾಯಿತಿಯ ಬಗ್ಗೆ ಮಾಹಿತಿ ನೀಡುವುದು ಮತ್ತು ಅವರು ಕೇಳುವ ಪ್ರಶ್ನೆಗಳಿಗೆ ಉತ್ತರಿಸಬೇಕಾಗಿಯೂ ಕೇಳಿಕೊಂಡಿದ್ದರು. ಹಾಗೆಯೇ ದೇವಸ್ಥಾನದ ಅಕ್ಕಪಕ್ಕದಲ್ಲಿರುವ ಸಮುದಾಯದವರಿಗೆ ಮಕ್ಕಳು ಬರುವ ವಿಚಾರ ತಿಳಿಸಿ, ಅವರಿಗೆ ಮಾಹಿತಿ ಕೊಟ್ಟು ಸಹಕರಿಸಲು ಕೇಳಿಕೊಂಡಿದ್ದರು. ಪ್ರತಿ ಗುಂಪಿನಲ್ಲಿ ಐದಾರು ಮಕ್ಕಳಿದ್ದು, ಒಬ್ಬರು ತಂಡದ ನಾಯಕರಾಗಿ ಆಯ್ಕೆಗೊಂಡಿದ್ದರು.

ಆ ಎಳೆಯ ಸಂಶೋಧಕರ ತಂಡಗಳು ತಮ್ಮ ಶೋಧನೆಯನ್ನು ಆರಂಭಿಸಿದವು. ಒಂದು ತಂಡ ಗ್ರಾಮ ಪಂಚಾಯಿತಿ ಅಧ್ಯಕ್ಷರ ಮನೆಗೆ ತೆರಳಿದರೆ, ಇನ್ನೊಂದು ಗುಂಪು ಗ್ರಾಮದ ದೇವಸ್ಥಾನದ ಬಳಿ ಸಾಗಿತು. ಇನ್ನೊಂದು ಗುಂಪು ಶಾಲೆಯಲ್ಲಿಯೇ ಉಳಿದು ಶಾಲೆಯ ಬಗ್ಗೆ ಮಾಹಿತಿಯನ್ನು ಸಂಗ್ರಹಿಸತೊಡಗಿತು.

ಪಂಚಾಯಿತಿ ಅಧ್ಯಕ್ಷರು ಮಕ್ಕಳನ್ನು ನಗುಮುಖದೊಂದಿಗೆ ಸ್ವಾಗತಿಸಿದರು. ಅವರ ಮನೆ ಗ್ರಾಮೀಣ ಸಂಪ್ರದಾಯದ ಮನೆಯಾಗಿದ್ದು, ನಡುಮನೆಯ ತೂಗು ಉಯ್ಯಾಲೆಯಂತಹ ಆಸನದಲ್ಲಿ ಪಂಚಾಯಿತಿಯ ಅಧ್ಯಕ್ಷರು ಕುಳಿತಿದ್ದರು. ಮಕ್ಕಳು ಚಾಪೆಯ ಮೇಲೆ ಕುಳಿತರು. "ಮಕ್ಕಳೇ, ನೀವು ನಮ್ಮ ಮನೆಗೆ ಬಂದದ್ದು ಖುಷಿಯಾಗಿದೆ. ಬಂದಿರುವ ವಿಚಾರವೇನು?" ಎಂದರು. ತಂಡದ ನಾಯಕಿ ಸಹನ ತಾವು ಗ್ರಾಮ ಪಂಚಾಯಿತಿಯ ಬಗ್ಗೆ ಮಾಹಿತಿಯನ್ನು ಸಂಗ್ರಹಿಸಲು ಬಂದಿರುವುದಾಗಿ ತಿಳಿಸಿ ಕೆಲವು ಪ್ರಶ್ನೆಗಳನ್ನು ಅಧ್ಯಕ್ಷರ ಮುಂದಿಟ್ಟಳು. ಗ್ರಾಮ ಪಂಚಾಯಿತಿ

ಎಂದರೇನು? ಅದು ಏನು ಕೆಲಸ ಮಾಡುತ್ತದೆ? ಅದು ಹೇಗೆ ರಚನೆಗೊಳ್ಳುತ್ತದೆ? ಇತ್ಯಾದಿ. (ಇಲ್ಲಿ ಗಮನಿಸಿದ ಸೂಕ್ಷ್ಮವಾದ ವಿಚಾರವೆಂದರೆ ಪಂಚಾಯಿತಿ ಅಧ್ಯಕ್ಷರೂ ಸಹ ಮಕ್ಕಳಿಗೆ ಪಂಚಾಯಿತಿಯ ಬಗ್ಗೆ ವಿವರಿಸಲು ಒಂದು ಟಿಪ್ಪಣಿಯನ್ನು ಸಿದ್ಧಪಡಿಸಿ ಕೊಂಡಿದ್ದರು). ಗ್ರಾಮ ಪಂಚಾಯಿತಿ ಹೇಗೆ ರಚನೆಯಾಗುತ್ತದೆ, ಚುನಾವಣಾ ಪ್ರಕ್ರಿಯೆ, ಪಂಚಾಯಿತಿಗೆ ಆಯ್ಕೆಯಾದ ಸದಸ್ಯರ ಕಾರ್ಯಗಳೇನು? ಇರುವ ಅನುದಾನಗಳಾವುವು? ಅವುಗಳ ಬಳಕೆ ಹೇಗೆ? ಯೋಜನೆಗಳು, ಅವುಗಳ ಅನುಷ್ಠಾನ ಮತ್ತು ಫಲಾನುಭವಿಗಳು ಯಾರು? ಮುಂತಾದ ಮಕ್ಕಳ ಪ್ರಶ್ನೆಗಳಿಗೆ ಅಧ್ಯಕ್ಷರು ವಿವರವಾಗಿ ಮಾಹಿತಿ ನೀಡಿದರು. ಈ ಸಂದರ್ಭದಲ್ಲಿ ಮಕ್ಕಳು ಟಿಪ್ಪಣಿ ಬರೆದುಕೊಳ್ಳುತ್ತಿದ್ದರು. ಕೊನೆಯಲ್ಲಿ, ನಿಮ್ಮ ಅವಧಿಯಲ್ಲಿ ಪಂಚಾಯಿತಿಯಿಂದ ಗ್ರಾಮದ ಯಾವ ರಸ್ತೆಗಳನ್ನು ಕಟ್ಟಿಸಿದ್ದೀರಿ? ಮುಂತಾದಂತೆ ಕೆಲವು ಪ್ರಶ್ನೆಗಳನ್ನು ಕೇಳಿದರು. ಇದಕ್ಕೆ ಸರಿಯಾದ ಉತ್ತರಗಳನ್ನು ನೀಡಿದ ಅಧ್ಯಕ್ಷರು ಮಕ್ಕಳ ಈ ರೀತಿಯ ಕಲಿಕೆ ಮತ್ತು ಭಯರಹಿತವಾಗಿ ಮುಕ್ತ ಪ್ರಶ್ನೆ ಕೇಳುವ ಸಾಮರ್ಥ್ಯವನ್ನು ಕೊಂಡಾಡಿದರು.

ಇದೇ ರೀತಿ ದೇವಸ್ಥಾನಕ್ಕೆ ಭೇಟಿ ನೀಡಿದ ತಂಡವೂ ಸಹ ಸ್ಥಳೀಯ ಸಮುದಾಯದವರಿಂದ ಮಾಹಿತಿ ಸಂಗ್ರಹಿಸಿ, ದೇವಸ್ಥಾನದ ಇತಿಹಾಸ, ಯಾರು ಕಟ್ಟಿಸಿದವರು, ಅದಕ್ಕೆ ಖರ್ಚಾದ ಹಣವೆಷ್ಟು, ಅಲ್ಲಿನ ದೈನಂದಿನ ಕಾರ್ಯ ಚಟುವಟಿಕೆಗಳು, ಜಾತ್ರಾ ಮಹೋತ್ಸವ ಮತ್ತು ಅದರ ಆಚರಣೆ ಒಳಗೊಂಡಂತೆ ಆರು ಪುಟಗಳ ವರದಿಯನ್ನು ಸಿದ್ಧಪಡಿಸಿತ್ತು. ಹಾಗೆಯೇ ಶಾಲೆ ಬಗ್ಗೆ ಕಾರ್ಯನಿರ್ವಹಿಸಿದ ತಂಡವೂ ಸಹ ಸಮಗ್ರ ಮಾಹಿತಿಯನ್ನು ಸಂಗ್ರಹ ಮಾಡಿತ್ತು.

ಅಂತಿಮವಾಗಿ ಎಲ್ಲಾ ತಂಡಗಳು ತಾವು ಸಂಗ್ರಹಿಸಿದ್ದ ವಿವರಗಳನ್ನು ಪರಸ್ಪರ ತಂಡದೊಂದಿಗೆ ಹಂಚಿಕೆ ಮಾಡಿಕೊಂಡವು.

**ಈ ತರಗತಿ ಪ್ರಕ್ರಿಯೆಯಿಂದ ಕೆಳಗಿನ ಅಂಶಗಳನ್ನು ಗಮನಿಸಲಾಯಿತು**

ಮಕ್ಕಳಲ್ಲಿದ್ದ ಆತ್ಮವಿಶ್ವಾಸ ಶಿಕ್ಷಕರು ನೀಡಿದ ಯಾವುದೇ ಕಾರ್ಯವನ್ನು ಕೈಗೆತ್ತಿಕೊಳ್ಳಲು ಸಿದ್ಧರನ್ನಾಗಿಸಿತ್ತು.

1. ತಮ್ಮ ಸಹಪಾಠಿಗಳಿಂದ ಒದಗಿ ಬಂದ ಮರುಮಾಹಿತಿಯನ್ನು ಮುಕ್ತವಾಗಿ ಯಾವುದೇ ಭಿನ್ನಾಭಿಪ್ರಾಯವಿಲ್ಲದೆ ಒಪ್ಪಿಕೊಳ್ಳುತ್ತಿದ್ದರು.
2. ಈ ಚಟುವಟಿಕೆ ಒಂದು ರೀತಿಯಲ್ಲಿ ಸಾವಯವ ರೀತಿಯ ಕಲಿಕಾ ಪ್ರಕ್ರಿಯೆಗೆ ಅನುವು ಮಾಡಿಕೊಟ್ಟಿತ್ತು.
3. ಮಕ್ಕಳ ಮೇಲೆ ಯಾವುದೇ ಒತ್ತಡವಿರಲಿಲ್ಲ, ಶಿಕ್ಷಕರು ಮತ್ತು ಇತರೆ ವಯಸ್ಕರೊಂದಿಗೆ ಮುಕ್ತವಾಗಿ ಮಾತನಾಡಿ ತಮಗೆ ಅಗತ್ಯವಿದ್ದ ಮಾಹಿತಿಯನ್ನು ಸಂಗ್ರಹಿಸುತ್ತಿದ್ದರು.
4. ಮಕ್ಕಳು ಪುಟ್ಟ ಸಂಶೋಧಕರಂತೆ ತೊಡಗಿಕೊಂಡಿದ್ದರು. ಒಂದು ರೀತಿಯಲ್ಲಿ ಕ್ರಿಯಾಶೀಲ ಭಾಗವಹಿಸುವಿಕೆಯೊಂದಿಗೆ ಕಲಿಯುತ್ತಿದ್ದರು. ಜನರೊಂದಿಗೆ ಮಾತನಾಡುವುದು, ಅಗತ್ಯ ಮಾಹಿತಿಗಾಗಿ ಸೂಕ್ತ ಪ್ರಶ್ನೆ ಮಾಡುವುದು ಇವೆಲ್ಲಾ ಮಕ್ಕಳನ್ನು ಅನುಭವದ ಕಲಿಕೆಗೆ ತೊಡಗಿಸಿತ್ತು.

5. ಶಿಕ್ಷಕರು ಮಕ್ಕಳ ಕಲಿಕೆಯನ್ನು ಅನುಕೂಲಿಸುವವರಾಗಿದ್ದರೇ ಹೊರತು ಮಾಹಿತಿಯನ್ನು ತುರುಕುವ ಮತ್ತು ಆ ನಂತರ ಅದನ್ನು ಪರೀಕ್ಷಿಸಿ, ಅವರ ಅರ್ಥೈಸುವಿಕೆಯನ್ನು ಪರಿಶೀಲಿಸುವ ವ್ಯಕ್ತಿಯಾಗಿರಲಿಲ್ಲ.
6. ಎಲ್ಲಿಯೂ ಲಿಂಗ ಭೇದ ಕಾಣಲಿಲ್ಲ. ಎಲ್ಲಾ ಮಕ್ಕಳು ಸಮಾನವಾಗಿಯೇ ಮುಖ್ಯ ಪಾತ್ರಗಳನ್ನು ವಹಿಸುತ್ತಿದ್ದರು, ಪರಸ್ಪರರ ಅಭಿಪ್ರಾಯಗಳನ್ನು ಗೌರವಿಸುತ್ತಿದ್ದರು.
7. ಎಲ್ಲಿಯೂ ಮಕ್ಕಳ ನಡುವೆ ಸ್ಪರ್ಧಾತ್ಮಕ ವರ್ತನೆ ಕಾಣಲಿಲ್ಲ; ಬದಲಾಗಿ ಸಹಕಾರ ಮತ್ತು ಸಹಯೋಗದ ಕಲಿಕೆಯಿಂದ ಕೂಡಿದ ವಾತಾವರಣವಿತ್ತು.

ಈ ಮೇಲಿನ ನಿದರ್ಶನಗಳಿಂದ ಸಾಂಪ್ರದಾಯಿಕ ಶಾಲಾ ವ್ಯವಸ್ಥೆಯಲ್ಲಿ ಮಕ್ಕಳು ಹೊಂದಾಣಿಕೆ ಮಾಡಿಕೊಳ್ಳಲು ಏಕೆ ಕಷ್ಟಪಡುತ್ತಾರೆ ಎಂಬುದರ ಚಿತ್ರಣ ದೊರೆಯುತ್ತದೆ. ವಾಸ್ತವವಾಗಿ ಮಗುವಿನ ಆಸಕ್ತಿಯೇ ಬೇರೆ ಹಾಗೂ ಶಾಲೆಯಲ್ಲಿ ದಿನದ ವೇಳಾಪಟ್ಟಿಯಡಿ ಕಲಿಸಲಾಗುತ್ತಿರುವ ವಿಷಯಗಳೇ ಬೇರೆಯಾಗಿರುತ್ತವೆ. ಅಲ್ಲಿ ಯಶವಂತನಿಗೆ ಸಿಕ್ಕ ಅವಕಾಶ ವಿನಾಯಕನಿಗೆ ಸಿಗಲಿಲ್ಲ.

ಎರಡನೆಯದಾಗಿ ಹಾಗೂ ಬಹುಮುಖ್ಯವಾಗಿ ಶಾಲೆಯಲ್ಲಿ ಶಿಕ್ಷಕಿ ಯಾವ ಮಗುವನ್ನು ತಿರಸ್ಕಾರ ಭಾವದಿಂದ ಕಾಣುವರೋ ಆ ಮಗುವನ್ನು ತರಗತಿಯ ಸಹಪಾಠಿಗಳೂ ತಿರಸ್ಕರಿಸುವರು.

ಆಗಷ್ಟೇ ವ್ಯಕ್ತಿತ್ವದ ರೂಪುಗೊಳ್ಳುವಿಕೆಯ ಹಂತದಲ್ಲಿರುವ ಮಗು ತರಗತಿಯಲ್ಲಿ ಶಿಕ್ಷಕಿ ಹಾಗೂ ಸಹಪಾಠಿಗಳ ಇಂತಹ ವರ್ತನೆಯಿಂದ ತನ್ನ ಆತ್ಮವಿಶ್ವಾಸವನ್ನು ಕಳೆದುಕೊಳ್ಳುವುದಲ್ಲದೆ ಆ ಮಗುವಿನ ಮನೋವೃತ್ತಿಯ ಮೇಲೆ ನಕಾರಾತ್ಮಕ ಪರಿಣಾಮಗಳು ಬೀರುತ್ತವೆ.

ಆದರೆ ಇಂತಹ ಮಕ್ಕಳಿಗಾಗಿಯೇ ಕಲಿಕಾ ಚಟುವಟಿಕೆಗಳನ್ನು ಯೋಜಿಸಿ ಆಯೋಜಿಸುವುದು ಎಷ್ಟರ ಮಟ್ಟಿಗೆ ಕಾರ್ಯಸಾಧ್ಯ? ಇದರಿಂದ ಬೇರೆ ಮಕ್ಕಳ ಕಲಿಕೆಗೆ ಅಡ್ಡಿಯುಂಟಾಗುವುದಿಲ್ಲವೇ? ಅವರಿಗಾಗಿಯೇ ಪ್ರತ್ಯೇಕ ತರಗತಿ ಅಥವಾ ಶಾಲೆ ಇದ್ದರೆ ಉತ್ತಮವಲ್ಲವೇ? ಎಂಬ ಪ್ರಶ್ನೆ ಮೂಡುವುದು ಸಹಜ. ಆದರೆ ಸಮಾಜವೊಂದು ವಿವಿಧ ವಯೋಮಾನದ, ವಿವಿಧ ಆಸಕ್ತಿ ಉಳ್ಳವರ, ವಿವಿಧ ಸಮಸ್ಯೆ ಹೊಂದಿರುವ ಜನಸಮುದಾಯವನ್ನು ಹೊಂದಿರುವ ಗುಂಪಾದರೆ, ಆ ಗುಂಪಿನ ಸಮುದಾಯದ ಮಕ್ಕಳನ್ನೇ ಒಳಗೊಂಡಿರುವ ಶಾಲೆಯು ವೈವಿಧ್ಯಮಯ ಆಸಕ್ತಿಗಳನ್ನು ಹೊಂದಿರುವ ಮಕ್ಕಳಿಗೆ ಪೂರಕ ಕಲಿಕಾ ಪರಿಸರವನ್ನು ಒದಗಿಸಬೇಕು. ಆಗ ಮಾತ್ರ ಸಮನ್ವಯ ಶಿಕ್ಷಣದ ನೈಜ ಉದ್ದೇಶ ಈಡೇರುತ್ತದೆ.

## ತರಬೇತಿಯೇ ಇಲ್ಲದ ವಯಸ್ಕರ ಗುಂಪೊಂದು ಮಕ್ಕಳ ಕಲಿಕೆಗೆ ಅನುಕೂಲಿಸಿದ ಬಗೆ

ಮಾಯಾ ಪ್ರಜಾಯತ್ನ ಸಂಸ್ಥೆಯ ಜೀವನ ಕೌಶಲ ಪಾಠಶಾಲೆಯಲ್ಲಿ ಕಲಿಕಾ ಅನುಕೂಲಗಾರಳಾಗಿ ನಾನು ಆಯ್ಕೆಗೊಂಡಿದ್ದೆ. ಅದು ನನ್ನ ಮೊಟ್ಟಮೊದಲ

ಕೇಂದ್ರವಾಗಿತ್ತು. ಅದೊಂದು 12ರಿಂದ 14 ವಯಸ್ಸಿನ, ಶಾಲೆಗೆ ದಾಖಲಾಗದ ಅಥವಾ ಶಾಲೆಯಿಂದ ಹೊರಗುಳಿದ ಮಕ್ಕಳಿಗೆ ಅನೌಪಚಾರಿಕ ಶಿಕ್ಷಣವನ್ನು ಒದಗಿಸುವ ಕೇಂದ್ರವಾಗಿತ್ತು. ಅಲ್ಲಿದ್ದ 30 ಮಕ್ಕಳೂ ನಾನಾ ಕಾರಣಗಳಿಂದ ಶಾಲೆ ಬಿಟ್ಟವರು. ಬಹುತೇಕ ಮಕ್ಕಳು ತಮಗೆ ಶಾಲೆಗೆ ಹೋಗುವ ಆಸಕ್ತಿ ಇಲ್ಲದೇ ಇರುವುದರಿಂದ ಶಾಲೆ ಬಿಟ್ಟಿರುವುದಾಗಿ ತಿಳಿಸಿದರೆ, ಇನ್ನು ಕೆಲವರು ಅನಿವಾರ್ಯ ಕಾರಣಗಳಿಂದ ಶಾಲೆಗೆ ಹೋಗುವ ಅವಕಾಶವನ್ನು ಕಳೆದುಕೊಂಡಿದ್ದರು. ಈ ಮಕ್ಕಳು ತಮ್ಮ ಜೀವನದಲ್ಲಿ ಸಾಕಷ್ಟು ಏರಿಳಿತಗಳನ್ನು ಕಂಡವರಾಗಿದ್ದರು. ಕೆಲವರು ಕುಡಿತದ ಚಟದಿಂದ ಪರಿಣಮಿಸುತ್ತಿದ್ದ ಕೌಟುಂಬಿಕ ಹಿಂಸಾಚಾರವನ್ನು ಉಂಡವರಾಗಿದ್ದರೆ, ಮತ್ತೆ ಕೆಲವರು ಪೋಷಕರನ್ನು ಕಳೆದುಕೊಂಡಿರುವುದು, ಇನ್ನೂ ಕೆಲವರು ತಾಯಂದಿರೊಂದಿಗೆ ಇದ್ದು ತಂದೆಯಿಂದ ದೂರವಾಗಿದ್ದರು. ಹೀಗೆ ಒಬ್ಬೊಬ್ಬರೂ ಒಂದೊಂದು ರೀತಿಯ ಹಿನ್ನೆಲೆಯಿಂದ ಬಂದವರಾಗಿದ್ದರು.

ನನ್ನೊಂದಿಗೆ ಇನ್ನೂ ಮೂರು ಜನ ಕಲಿಕಾ ಅನುಕೂಲಗಾರರಿದ್ದರು. ನಾವ್ಯಾರೂ ತರಬೇತಿ ಪಡೆದ ಶಿಕ್ಷಕರಾಗಿರಲಿಲ್ಲ. ಆದರೆ ನಾವೆಲ್ಲರೂ ಮಕ್ಕಳ ಬಗ್ಗೆ ಕಾಳಜಿ ಮತ್ತು ಆಸಕ್ತಿ ಹೊಂದಿರುವ ವ್ಯಕ್ತಿಗಳಾಗಿದ್ದೆವು. ಬಹುತೇಕ ಮಕ್ಕಳಿಗೆ ಕೇಳಿಸಿಕೊಳ್ಳುವುದೇ ಅಗಲಿ ಅಥವಾ ಒಂದೆಡೆ ಕುಳಿತು ಕೆಲ ನಿಮಿಷ ಕೆಲಸ ಮಾಡುವುದೇ ಆಗಲಿ ಅಭ್ಯಾಸವಿರಲಿಲ್ಲ. ಇದರಿಂದ ಈ ಮಕ್ಕಳನ್ನು ಒಂದೆಡೆ ಹಿಡಿದಿಟ್ಟುಕೊಳ್ಳುವುದು, ಅವರು ನಾವು ಹೇಳುವುದನ್ನು ಕೇಳಿಸಿಕೊಳ್ಳುವಷ್ಟು ಹಂತಕ್ಕೆ ಅವರನ್ನು ಹಿಡಿದಿಟ್ಟುಕೊಳ್ಳುವುದಕ್ಕೆ ನಮಗೆ ಹರಸಾಹಸವಾಗಿತ್ತು.

ಈ ಮಕ್ಕಳು ಯಾವುದೇ ಸಮಯದಲ್ಲಿ ಶಾಲೆಯನ್ನು ಬಿಟ್ಟು ಮನೆಯಲ್ಲಿ ಆರ್ಥಿಕ ಬೆಂಬಲ ನೀಡುವ ಸಲುವಾಗಿ ಕೆಲಸಕ್ಕೆ ಸೇರಿಕೊಳ್ಳುವ ಸಾಧ್ಯತೆ ಇದ್ದ ಕಾರಣ, ಸೀಮಿತ ಅವಧಿಯಲ್ಲಿ ಓದುವುದು, ಬರೆಯುವುದು ಮತ್ತು ದೈನಂದಿನ ಜೀವನದ ವ್ಯವಹಾರ ಜ್ಞಾನಕ್ಕೆ ಅಗತ್ಯವಿರುವಷ್ಟು ಗಣಿತವನ್ನು ಕಲಿಸುವುದು ಹಾಗೂ ಸಾಧ್ಯವಾದಷ್ಟು ಮಟ್ಟಿಗೆ ಅವರ ಕರಕುಶಲ ಅಭಿವೃದ್ಧಿಯನ್ನು ಮಾಡುವುದು ನಮ್ಮ ಗುರಿಯಾಗಿತ್ತು. ಮೊದಲಿಗೆ ಇವರಿಗೆ ಏನು ಹೇಳಿಕೊಡಬೇಕೆಂಬ ಪಟ್ಟಿ ಮಾಡಿದ ನಮ್ಮ ಗುಂಪು ಅದಕ್ಕೆ ತಕ್ಕಂತಹ ಪರಿಕರಗಳನ್ನು ಹೊಂದಿಸಿಕೊಂಡು, ಚಟುವಟಿಕೆಗಳ ಮೂಲಕ ಕಲಿಸುವ ಪ್ರಯತ್ನ ಮಾಡಿತು. ಆದರೆ ನಮ್ಮ ಪ್ರಯತ್ನ ಮಕ್ಕಳಲ್ಲಿ ಆಸಕ್ತಿಯನ್ನು ಉಂಟುಮಾಡಲೇ ಇಲ್ಲ. ಬದಲಾಗಿ ಈ ಮಕ್ಕಳ ಪರಿಸ್ಥಿತಿಗೆ ಸರಿಹೊಂದಲಿಲ್ಲ. ನಾವು ಅವರಿಗೆ ಏನು ಹೇಳಿಕೊಡಬೇಕೆಂಬುದರ ಬಗ್ಗೆ ಒಂದು ದೈನಂದಿನ ನಿರ್ದಿಷ್ಟ ಯೋಜನೆ ರೂಪಿಸಬೇಕಾಗಿತ್ತು. ಆದುದರಿಂದ ಶಾಲೆಯ ನಂತರದ ಅವಧಿಯಲ್ಲಿ ಮರುದಿನದ ಯೋಜನೆ ರೂಪಿಸಲು ಸಾಕಷ್ಟು ಚರ್ಚೆಗಳನ್ನು ಮಾಡತೊಡಗಿದೆವು. ಈ ಮಕ್ಕಳ ಸನ್ನಿವೇಶಕ್ಕೆ ಯಾವುದು ಕಾರ್ಯಸಾಧ್ಯ, ಯಾವುದರಲ್ಲಿ ಮಕ್ಕಳು ಆಸಕ್ತಿಯನ್ನು ತೋರಿಸುತ್ತಾರೋ, ಅವುಗಳನ್ನು ಪರಿಗಣಿಸಿ ನಮ್ಮ ಯೋಜನೆಯನ್ನು ರೂಪಿಸಲು ಪ್ರಾರಂಭಿಸಿದೆವು. ತಮಗೆ ಸೂಕ್ತವಾಗುವ ಪಠ್ಯಕ್ರಮವನ್ನು ರೂಪಿಸಿ, ಕಲಿಕೆಗೆ ಅನುಕೂಲ ಮಾಡಿಕೊಡುವೆಡೆಗೆ ಮಕ್ಕಳೇ ನಮ್ಮನ್ನು ಕೊಂಡೊಯ್ದರು.

ಅವುಗಳ ಒಂದಿಷ್ಟು ಉದಾಹರಣೆಗಳು ಹೀಗಿವೆ

1. ಆರಂಭದಲ್ಲಿ ಆಕ್ರಮಣಕಾರಿಯಾಗಿದ್ದ ಮಕ್ಕಳು ಶಾಲೆಯ ಬಳಿ ಕಂಡ ನಾಯಿಗಳಿಗೆ ಕಲ್ಲು ಹೊಡೆಯುತ್ತಿದ್ದರು. ಈ ಅಭ್ಯಾಸ ತಪ್ಪಿಸಲು ನಮ್ಮ ಗುಂಪಿನಲ್ಲಿದ್ದ ಪ್ರಾಣಿಸ್ನೇಹಿ ಅನುಕೂಲಗಾರರೊಬ್ಬರು, 'ಪ್ರಾಣಿಗಳು' ಎಂಬ ಪರಿಕಲ್ಪನೆಯ ಮೇಲೆ ಯೋಜನೆ ತಯಾರಿಸಿದರು. ಅದರಲ್ಲಿ ಎಲ್ಲಾ ಮಕ್ಕಳಿಗೂ ತಮಗಿಷ್ಟವಾದ ಪ್ರಾಣಿ ಯಾವುದು ಮತ್ತು ಅದನ್ನು ಇಷ್ಟಪಡಲು ಏನು ಕಾರಣ ಎಂಬ ಚರ್ಚೆಯೊಂದಿಗೆ ಪರಿಕಲ್ಪನೆಯನ್ನು ಆರಂಭಿಸಲಾಯಿತು. ಕೆಲವು ಮಕ್ಕಳು ತಮ್ಮ ಇಷ್ಟವಾದ ಪ್ರಾಣಿಗಳ ಹೆಸರುಗಳನ್ನು ಮತ್ತು ಅದರ ವಿವರಣೆಯನ್ನು ಹೇಳುತ್ತಿರುವಾಗ, ಅದರ ಬಗ್ಗೆ ಯೋಚನೆಯೇ ಮಾಡದಿದ್ದ ಮಕ್ಕಳು (ವಿಶೇಷವಾಗಿ ನಾಯಿಗಳಿಗೆ ಕಲ್ಲು ಹೊಡೆಯುತ್ತಿದ್ದವರು) ತಮಗೆ ಇಷ್ಟವಾದ ಪ್ರಾಣಿಯ ಹೆಸರೇನೆಂಬುದನ್ನು ಯೋಚಿಸತೊಡಗಿದರು. ಬೇರೆಯವರು ಹೇಳುತ್ತಿದ್ದಂತೆ ಪ್ರಾಣಿಗಳನ್ನು ಏಕೆ ಇಷ್ಟಪಡಬೇಕು ಎಂಬುದು ಅವರಿಗೆ ಮೇಲ್ನೋಟಕ್ಕೆ ಅರ್ಥವಾಗತೊಡಗಿತು. ಈ ಚರ್ಚೆ ಕ್ರಮೇಣ ಮಕ್ಕಳು ನಾಯಿಗೆ ಕಲ್ಲು ಹೊಡೆಯುವುದನ್ನು ನಿಲ್ಲಿಸುವಂತೆ ಮಾಡಿತು. ನಂತರ ನಮಗೆ ಸಾಮಾನ್ಯವಾಗಿ ಕಾಣುವ ಪ್ರಾಣಿಗಳು ಹಾಗೂ ಅವುಗಳಿಂದಾಗುವ ಉಪಯೋಗಗಳ ಬಗ್ಗೆ ಅರ್ಥಮಾಡಿಕೊಳ್ಳಲು ಹಾಗೂ ಮುಂದುವರೆದು ಸಾಕು ಪ್ರಾಣಿಗಳು ಹಾಗೂ ಕಾಡುಪ್ರಾಣಿಗಳು ಎಂದು ವರ್ಗೀಕರಣ ಮಾಡಿ, ಅವುಗಳ ಬಗ್ಗೆ ಕಲಿಯುವುದನ್ನು ಅನುಕೂಲ ಮಾಡಿಕೊಡಲಾಯಿತು. ಕೋತಿಗಳ ಗುಂಪೊಂದು ಶಾಲೆಯನ್ನು ಹಾದು ಹೋಗುತ್ತಿರುವುದನ್ನು ಉದಾಹರಣೆಯಾಗಿ ಇಟ್ಟುಕೊಂಡು, ಕಾಡು ಮತ್ತು ಪ್ರಾಣಿಗಳಿಗಿರುವ ನಂಟೇನು? ಅವುಗಳೇಕೆ ಕಾಡಿನಿಂದ ಜನವಸತಿ ಪ್ರದೇಶಗಳಿಗೆ ಬರುತ್ತವೆ, ಹೆಚ್ಚುತ್ತಿರುವ ಜನಸಂಖ್ಯೆ ಮತ್ತು ಕಡಿಮೆಗೊಳ್ಳುತ್ತಿರುವ ಪ್ರಾಣಿಸಂತತಿ, ಈ ಎಲ್ಲಾ ವಿಚಾರಗಳ ಬಗ್ಗೆ ಮಕ್ಕಳು ಕಲಿಯಲು ಅನುಕೂಲ ಮಾಡಿಕೊಡಲಾಯಿತು. ಎಲ್ಲ ಮಕ್ಕಳು ಪ್ರಾಣಿಯ ಜೀವನಾವಧಿಯ ಬಗ್ಗೆ ತಿಳಿದು, ತರಗತಿಯೊಂದಿಗೆ ಹಂಚಿಕೊಳ್ಳುವಂತೆ ಅನುಕೂಲ ಮಾಡಿಕೊಡಲಾಯಿತು. ಅಂತಿಮವಾಗಿ ಮಕ್ಕಳು ತಮಗಿಷ್ಟವಾದ ಪ್ರಾಣಿಗಳ ಚಿತ್ರವನ್ನು ಬಿಡಿಸಲು, ಮೃಗಾಲಯ ಮತ್ತು ಅಭಯಾರಣ್ಯದ ಮಾದರಿಗಳನ್ನು ರೂಪಿಸಲು ಹಾಗೂ ಶಾಲೆಗೆ ಒಂದು ನಾಯಿಯನ್ನು (ನಿಕ್ಕಿ) ದತ್ತು ತೆಗೆದುಕೊಳ್ಳುವ ಮೂಲಕ ಪರಿಕಲ್ಪನೆಯನ್ನು ಮಕ್ಕಳಿಗೆ ಆಸಕ್ತಿಕರಗೊಳಿಸಲಾಯಿತು.

ಬಹಳಷ್ಟು ಆಕ್ರಮಣಕಾರಿಯಾಗಿದ್ದ ಮಕ್ಕಳ ವರ್ತನೆಯನ್ನು ತಣಿಸುವುದಕ್ಕಾಗಿ ಅನುಕೂಲಗಾರರೊಬ್ಬರು ಒಂದು ಉತ್ತಮ ಸಲಹೆ ನೀಡಿದರು. ಅದರಂತೆ ಮಕ್ಕಳು ಬಂದೊಡನೆ ಅವರಿಗೆ ಡ್ರಮ್/ತಮಟೆಯಂತಹ ಸಂಗೀತಕ್ಕೆ ತಮಗೆ ಇಷ್ಟ ಬಂದಂತೆ ನೃತ್ಯ ಮಾಡಲು ಅನುಕೂಲ ಮಾಡಿಕೊಡುತ್ತಿದ್ದೆವು. ಅವರು

ಸಾಕಾಗುವಷ್ಟು ನೃತ್ಯ ಮಾಡಿ ತಣಿದ ನಂತರ ಪ್ರಾರ್ಥನೆ ಮತ್ತು ಧ್ಯಾನದೊಂದಿಗೆ ದೈನಂದಿನ ತರಗತಿ ಆರಂಭವಾಗುತ್ತಿತ್ತು. ಇದರಿಂದ ಅವರ ವರ್ತನೆಯಲ್ಲಿ ಸಾಕಷ್ಟು ಸುಧಾರಣೆ ಕಂಡುಬಂದಿತು. ಕೋಪ ಮತ್ತು ಉದ್ವೇಗದಿಂದ ಕೂಡಿದ ವರ್ತನೆಗಳು ಕಡಿಮೆಯಾದವು.

2. ತರಗತಿಯಲ್ಲಿ ಮಕ್ಕಳಿಗೆ ನೃತ್ಯ ಹೇಳಿಕೊಡುತ್ತಿದ್ದ ಸಂದರ್ಭದಲ್ಲಿ ಶಾಲೆಯಲ್ಲಿ ಮಕ್ಕಳಿಂದಲೇ ಲೀಡರ್ ಎಂದು ಗುರುತಿಸಿಕೊಂಡಿದ್ದ ಹುಡುಗನೊಬ್ಬ (ಆನಂದ) ಆಕಸ್ಮಿಕವಾಗಿ ಬಿದ್ದು ಕೈಯನ್ನು ಮುರಿದುಕೊಂಡ. ಅವನ ಕೈ 'V' ಆಕಾರವಾಗಿದ್ದನ್ನು ಕಂಡು ಎಲ್ಲಾ ಮಕ್ಕಳು ಗಾಬರಿಗೊಂಡರು. ಹೀರೋ ಎಂಬುದಾಗಿ ಬಿಂಬಿಸಿಕೊಂಡಿದ್ದ ಆನಂದ ಮಗುವಿನಂತೆ ಜೋರಾಗಿ ಅಳಲು ಆರಂಭಿಸಿದ. ತಕ್ಷಣವೇ ಅನುಕೂಲಗಾರರು ಪ್ರಥಮ ಚಿಕಿತ್ಸೆಯನ್ನು ನೀಡಿ, ಸಮೀಪದ ಆಸ್ಪತ್ರೆಗೆ ಕರೆದುಕೊಂಡು ಹೋಗಿ ಚಿಕಿತ್ಸೆಯನ್ನು ಒದಗಿಸಿದರು. ನಂತರ ಅನುಕೂಲಗಾರರೇ ಆನಂದನನ್ನು ಅವನ ಮನೆಗೆ ಕರೆದುಕೊಂಡು ಹೋಗಿ ಅವರ ಪೋಷಕರಿಗೆ ನಡೆದ ಘಟನೆಯನ್ನು ವಿವರಿಸಿ, ಅಪಾಯವಿಲ್ಲವೆಂಬ ಮನವರಿಕೆ ಮಾಡಿಸಿ ಬಂದರು. ಆಗ ಮಕ್ಕಳ ಕಲಿಕೆಗೆ ಅನುಕೂಲ ಮಾಡಿಕೊಡಲು ಹುಟ್ಟಿಕೊಂಡ ಪರಿಕಲ್ಪನೆಯೇ "ಪ್ರಥಮ ಚಿಕಿತ್ಸೆ". ವಿವಿಧ ಗಾಯಗಳಿಗೆ, ಅಂಗಾಂಗಗಳ ಮೂಳೆ ಮುರಿದಾಗ, ಮೂರ್ಛೆ ಹೋದಾಗ, ತಲೆ ಸುತ್ತಿ ಬಿದ್ದಾಗ, ಹುಳುಗಳು ಕಡಿದಾಗ, ಬೆಂಕಿಯ ಅಪಘಾತಕ್ಕೊಳಗಾದಾಗ, ಕಣ್ಣಿಗೆ ತೊಂದರೆಯಾದಾಗ ಇತ್ಯಾದಿ ವಿಚಾರಗಳನ್ನು ಮಕ್ಕಳು ಅರ್ಥಮಾಡಿಕೊಳ್ಳಲು ಚಟುವಟಿಕೆಗಳನ್ನು ಆಯೋಜಿಸಲಾಯಿತು ಮತ್ತು ಹೆಚ್ಚಿನ ಮಾಹಿತಿಗಾಗಿ ಸಂಪನ್ಮೂಲ ವ್ಯಕ್ತಿಗಳನ್ನು ಕರೆದು ಅವರಿಂದ ಪ್ರಾಯೋಗಿಕ ಮಾಹಿತಿಯನ್ನು ಒದಗಿಸಲಾಯಿತು. ಮಕ್ಕಳಿಗೆ ವಿಷಯ ಕೊಟ್ಟು ಅದರ ಬಗ್ಗೆ ಪಾತ್ರಾಭಿನಯ ಮಾಡುವಂತಹ ಚಟುವಟಿಕೆಗಳನ್ನು ನೀಡುವ ಮೂಲಕ ಅವರಿಗೆ ಎಷ್ಟರ ಮಟ್ಟಿಗೆ ಅರ್ಥವಾಗಿದೆ ಎಂಬುದನ್ನು ತಿಳಿದುಕೊಳ್ಳಲಾಯಿತು.

ಒಂದು ಬೇಸಿಗೆಯ ಮಧ್ಯಾಹ್ನದ ಊಟದ ವಿರಾಮದಲ್ಲಿ ನಾಗರಹಾವೊಂದು ಶಾಲಾ ಆವರಣದೊಳಗೆ ಬಂದಿತು. ಊಟ ಮಾಡಿ ಅಲ್ಲಿಯೇ ಅಲೆದಾಡುತ್ತಿದ್ದ ಮಕ್ಕಳು ಅದನ್ನು ಕಂಡು ಹಾವು ಎಂದು ಕಿರುಚಿಕೊಂಡರು. ಅನುಕೂಲಗಾರರು ಮೊದಲನೆ ಮಹಡಿಯಿಂದ ಇಳಿದು ಬರುವಷ್ಟರಲ್ಲಿ ಓಡಿ ಬಂದ ಸ್ಥಳೀಯರೊಬ್ಬರು ಮಕ್ಕಳ ಜತೆ ಸೇರಿಕೊಂಡು ಕೋಲಿನಿಂದ ಹಾವನ್ನು ಚಚ್ಚಿಬಿಟ್ಟಿದ್ದರು. ಮಕ್ಕಳ ಈ ವರ್ತನೆಯನ್ನು ಕಂಡ ಅನುಕೂಲಗಾರರಿಗೆ ಏನೂ ತೋಚದಂತಾಯಿತು. ಬಹುತೇಕವಾಗಿ ಅವರಲ್ಲಿನ ಆಕ್ರಮಣಕಾರಿ ವರ್ತನೆಯು ಇಳಿಮುಖಗೊಂಡಿತ್ತು. ಆದರೆ ಈ ಘಟನೆಯು ಎಲ್ಲರಲ್ಲೂ ಉದ್ವೇಗವನ್ನು ಹೆಚ್ಚಿಸಿತ್ತು ಮತ್ತು ಅದಾದ ನಂತರ ಎಲ್ಲರಲ್ಲೂ ಒಂದು ರೀತಿಯ ಮೌನ ಆವರಿಸಿತ್ತು. ತಾವು ಮಾಡಿದ್ದು ಸರಿಯಲ್ಲ ಎಂಬ ವಿಚಾರ ಅವರನ್ನು ಕಾಡಿದಂತಿತ್ತು. ಎಲ್ಲರೂ ಮೌನವಾಗಿ ತರಗತಿಗೆ ಬಂದರು. ಅನುಕೂಲಗಾರರು ನಡೆದ ಘಟನೆಯನ್ನು ವಿವರಿಸಲು

ಹುಡುಗನೊಬ್ಬನನ್ನು ಕೇಳಿದಾಗ ಅವನು ನಡೆದ ಸಂಗತಿಯನ್ನು ವಿವರಿಸಿದನು. ಇದರಿಂದ ಏನು ಪ್ರಯೋಜನ? ಎಂದು ಕೇಳಿದ್ದಕ್ಕೆ ಕೆಲವು ಮಕ್ಕಳು 'ಹಾವು ಕಚ್ಚಿದರೆ ಸತ್ತು ಹೋಗುತ್ತಾರೆ ಮಿಸ್ ಅದಕ್ಕೆ ಸಾಯಿಸಿದ್ದೇವೆ' ಎಂದರು. ಅದಕ್ಕೆ ಪ್ರತಿಕ್ರಿಯೆಯಾಗಿ ಅನುಕೂಲಗಾರರು 'ಆದರೆ ಹಾವು ಏನೂ ತಪ್ಪು ಮಾಡದಿದ್ದರೂ ಮನುಷ್ಯರು ಸಾಯಿಸಿಬಿಡುತ್ತಾರೆ' ಎಂದರು. ಆಗ ಹುಟ್ಟಿಕೊಂಡಿದ್ದೇ 'ಪರಿಸರ ಸಮತೋಲನ' ಎಂಬ ಪರಿಕಲ್ಪನೆ. ಪರಿಸರದಲ್ಲಿ ಗಿಡ, ಮರ, ಪ್ರಾಣಿ, ಪಕ್ಷಿಗಳು ಹೇಗೆ ಪರಸ್ಪರ ಅವಲಂಬಿತವಾಗಿವೆ ಎಂಬ ವಿಚಾರದ ಬಗ್ಗೆ ಕಲಿಕೆಯ ಅನುಕೂಲಗಾರಿಕೆ ಸಾಗಿತ್ತು. ಕಾಡು ಕಡಿಮೆಯಾಗುತ್ತಿರುವುದು, ಮನುಷ್ಯ ಸಂತತಿಯಿಂದ ಹಾಳಾಗುತ್ತಿರುವ ಪರಿಸರ, ದಿನೇ ದಿನೇ ಕಲುಷಿತಗೊಳ್ಳುತ್ತಿರುವ ಗಾಳಿ, ನೀರು, ಮಣ್ಣು ಮತ್ತು ಇದರ ಪರಿಣಾಮ ಇವೆಲ್ಲಾ ವಿಚಾರಗಳ ಕಲಿಕೆಯು ಮಕ್ಕಳ ಆಸಕ್ತಿಯಿಂದಲೇ ಮುಂದುವರೆದಿತ್ತು. ಪರಿಸರ ಅಸಮತೋಲನದ ಘೋರ ಪರಿಣಾಮವನ್ನು ವಿವರಿಸಲು ಅನುಕೂಲಗಾರರೊಬ್ಬರು ಮಕ್ಕಳ ಮನ ತಟ್ಟುವಂತಹ ಕಥೆಗಳನ್ನು ಹೆಣೆದರು.

3. ಬಹುತೇಕ ಮಕ್ಕಳು ಹದಿಹರೆಯಾವಸ್ಥೆಯಲ್ಲಿದ್ದ ಕಾರಣ ಪರಸ್ಪರ ಆಕರ್ಷಣೆಗೆ ಒಳಗಾಗುತ್ತಿದ್ದದ್ದು ಆಗಾಗ ನಮ್ಮ ಗಮನಕ್ಕೆ ಬರುತ್ತಿತ್ತು. ಒಂದು ಸಮಯದಲ್ಲಿ ಇದು ಸ್ಪಷ್ಟವಾಗಿ ಗೋಚರಿಸಲು ಆರಂಭವಾಯಿತು. ಈ ಪ್ರಾಕೃತಿಕ ವಿದ್ಯಮಾನವನ್ನು ನಿಲ್ಲಿಸಲು ಸಾಧ್ಯವಿಲ್ಲ. ಆದರೆ ಮಕ್ಕಳು ಈ ವಿಚಾರದಲ್ಲಿ ಮುಂದುವರೆಯುವುದಕ್ಕೂ ಮುನ್ನ ಅದಕ್ಕೆ ಕಾರಣ ಮತ್ತು ಅಪಾಯಗಳನ್ನು ತಿಳಿದಿರುವುದು ಬಹಳ ಮುಖ್ಯ ಎಂದು ಅನುಕೂಲಗಾರರ ತಂಡದಲ್ಲಿ ಚರ್ಚೆಯಾಯಿತು. ಆಗ ಅಗತ್ಯವೆಂದು ಗುರುತಿಸಲಾದ ಪರಿಕಲ್ಪನೆಯೇ "ದೈಹಿಕ ಮತ್ತು ಲೈಂಗಿಕ ಶಿಕ್ಷಣ." ಆದರೆ ಇವೆಲ್ಲಾ ಅವರಿಗೆ ತಿಳಿಸುವುದಾದರೂ ಹೇಗೆ? ಈ ಬಗ್ಗೆ ಹೆಣ್ಣು ಮಕ್ಕಳೊಡನೆ ನಾನು ಮತ್ತು ನನ್ನ ಮಹಿಳಾ ಸಹೋದ್ಯೋಗಿ ಹಾಗೂ ಗಂಡು ಮಕ್ಕಳೊಡನೆ ಪುರುಷ ಸಹೋದ್ಯೋಗಿಗಳು ಈ ವಿಷಯದ ಬಗೆಗಿನ ಕಲಿಕೆಗೆ ಅನುಕೂಲ ಮಾಡಿಕೊಡಲು ಯೋಜಿಸಿಕೊಂಡೆವು. ನಾವು ಮನುಷ್ಯನ ದೈಹಿಕ ಮತ್ತು ಮಾನಸಿಕ ಬೆಳವಣಿಗೆಯ ಬಗ್ಗೆ ಮಕ್ಕಳೊಂದಿಗೆ ಚರ್ಚಿಸಲು, ಚಟುವಟಿಕೆಗಳನ್ನು ನೀಡಲು ಆರಂಭಿಸಿದೆವು. ಶೈಶವಾವಸ್ಥೆಯಿಂದ ವೃದ್ಧಾಪ್ಯದವರೆಗೆ ಏನೆಲ್ಲಾ ದೈಹಿಕ ಬದಲಾವಣೆಗಳು ಆಗುತ್ತವೆ, ಒಂದೊಂದು ಅವಸ್ಥೆಯಲ್ಲಿಯೂ ಆಗುವ ಭಾವನಾತ್ಮಕ ಏರಿಳಿತಗಳ ಬಗ್ಗೆ ಮಾತನಾಡಿದೆವು. ಎಳೆಯ ವಯಸ್ಸಿನಲ್ಲಿ ಮದುವೆಯಾಗುವುದು, ತಾಯಿ/ ತಂದೆಯಾಗುವುದು, ಇದರಿಂದ ಉಂಟಾಗುವ ಆರ್ಥಿಕ, ಸಾಮಾಜಿಕ ಮತ್ತು ಆರೋಗ್ಯ ಸಮಸ್ಯೆಗಳ ಬಗ್ಗೆ ಮಕ್ಕಳಿಗೆ ಶಿಕ್ಷಣ ನೀಡಲಾಯಿತು. ಹೆಣ್ಣು ಮತ್ತು ಗಂಡು ಮಕ್ಕಳನ್ನು ಪ್ರತ್ಯೇಕವಾಗಿ ಡಾ॥ ಶ್ರೀಧರ್ ಎಂಬ ವೈದ್ಯರು ನಡೆಸುತ್ತಿದ್ದ ಲೈಂಗಿಕ ಶಿಕ್ಷಣ ಕಾರ್ಯಾಗಾರಕ್ಕೆ ಕರೆದೊಯ್ದು ಅಲ್ಲಿ ಮಕ್ಕಳು ಈ ಕುರಿತು ಶಿಕ್ಷಣ ಪಡೆಯಲು ಅನುಕೂಲ ಮಾಡಿಕೊಟ್ಟೆವು. ಕಾರ್ಯಾಗಾರದ ಬಗ್ಗೆ ಮಕ್ಕಳ

ಅರ್ಥೈಸುವಿಕೆಯ ಕುರಿತು ಅನುಕೂಲಗಾರರು ಚರ್ಚಿಸುವಾಗ ಒಂದು ಮಗು ತನ್ನ ದೇಹವನ್ನು ಅನಗತ್ಯವಾಗಿ ಮುಟ್ಟುವ ವ್ಯಕ್ತಿಯ ಬಗ್ಗೆ ಪ್ರಸ್ತಾಪಿಸಿದಳು. ಮಕ್ಕಳು ಈ ಬಗ್ಗೆ ತಿಳಿಯುವುದು ಬಹಳ ಮುಖ್ಯ ಎಂದು ಅರಿತು ಆ ವಿಚಾರದ ಬಗ್ಗೆ ಅರ್ಥೈಸಲು ಮುಂದಾದೆವು. ಅಕ್ಕರೆಯಿಂದ ಮುಟ್ಟುವುದು ಹೇಗಿರುತ್ತದೆ ಮತ್ತು ಕೆಟ್ಟ ಉದ್ದೇಶದಿಂದ ಮುಟ್ಟುವುದು ಹೇಗಿರುತ್ತದೆ ಎಂಬ ಬಗ್ಗೆ ಮಕ್ಕಳಿಗೆ ಜ್ಞಾನ ನೀಡಿದೆವು. ಮತ್ತು ಇಂತಹ ಸನ್ನಿವೇಶ ಎದುರಾದಾಗ ಪಾರಾಗುವುದು ಹೇಗೆ ಎಂಬುದನ್ನೂ ವಿವರಿಸಲಾಯಿತು. ಈ ಬಗ್ಗೆ ಶಿಕ್ಷಣ ನೀಡುವುದಕ್ಕಾಗಿ ಸಾಕಷ್ಟು ಕಥೆಗಳನ್ನು ನಾವೇ ಹುಟ್ಟು ಹಾಕಿದ್ದೆವು. ಒಟ್ಟಾರೆಯಾಗಿ ಕಥೆಗಳು, ನಿದರ್ಶನಗಳ ವಿವರಣೆಗಳು ಮಕ್ಕಳ ಮನಸ್ಥಿತಿ ಬದಲಾವಣೆಗೆ ಬಹಳಷ್ಟು ಸಹಾಯ ಮಾಡಿದವು ಎನ್ನಬಹುದು.

4. ಸುಮಾರು ದಿನ ತರಗತಿಯೊಳಗೇ ಬಾರದ ಅರುಣ್‌ನನ್ನು ಕಲಿಕೆಯಲ್ಲಿ ತೊಡಗಿಸಿದ್ದು: ಸಹಪಾಠಿಗಳ ನಡುವೆ ತರಲೆ ಎಂದೇ ಹೆಸರುವಾಸಿಯಾಗಿದ್ದ ಅರುಣ್ ಶಾಲೆಯವರೆಗೂ ಬಸ್‌ನಲ್ಲಿ ಬರುತ್ತಿದ್ದ. ಆದರೆ ತರಗತಿಯೊಳಗೆ ಬರುತ್ತಿರಲಿಲ್ಲ. ಕಿಟಕಿಯಲ್ಲಿಯೇ ನಿಲ್ಲುತ್ತಿದ್ದ. ಅನುಕೂಲಗಾರರ ಮಾತುಗಳನ್ನು ನಕಲು ಮಾಡುತ್ತಿದ್ದ, ಮಕ್ಕಳು ನಗುತ್ತಿದ್ದರು, ತರಗತಿ ನಡೆಸಲು ಅವನಿಂದ ಸಾಕಷ್ಟು ಅಡ್ಡಿಯುಂಟಾಗುತ್ತಿತ್ತು. ಅನುಕೂಲಗಾರರು ಅವನನ್ನು ತರಗತಿಯಲ್ಲಿ ಕರೆದು ಕೂರಿಸುವ ಪ್ರಯತ್ನ ಮಾಡುತ್ತಿದ್ದರು. ಹೀಗೆ ಅತ್ತಿತ್ತ ಸುತ್ತಾಡುವುದು, ಕಿಟಕಿಯಲ್ಲಿ ನಿಲ್ಲುವುದೇ ಮಾಡಿಕೊಂಡಿದ್ದ. ಅನುಕೂಲಗಾರರೊಮ್ಮೆ ಅವನಿಗೇ ತಿಳಿಯದಂತೆ ಅವನ ಹಿಂದೆ ಹೋಗಿ ನಿಂತು 'ಓಡಬೇಡ. ನಾನು ನಿನ್ನ ಹಿಡಿಯಲು ಬರುವುದಿಲ್ಲ. ನನಗೆ ಒಂದು ಪ್ರಶ್ನೆ ಇದೆ, ಅದಕ್ಕೆ ಉತ್ತರ ಕೊಡುವೆಯಾ?' ಎಂದರು. 'ಕೇಳಿ' ಎಂದ ಅವನು. 'ಹೀಗೇ ನೀನು ದಿನಾ ಸಮಯ ವ್ಯರ್ಥವಾಗಿ ಕಳೆದರೆ ದೊಡ್ಡವನಾದ ಮೇಲೆ ನಿನಗೆ ಒಳ್ಳೆಯ ಕೆಲಸ ಸಿಗುವುದಿಲ್ಲ' ಎಂದರು. ಅದಕ್ಕೆ ಅರುಣ್ 'ಬೇಡ ಬಿಡಿ. ನಾನು ಆಟೋ ಓಡಿಸುತ್ತೇನೆ' ಎಂದ. 'ಆಟೋ ಮೀಟರ್ ಹಣ ತೆಗೆದುಕೊಳ್ಳೋದು ಮತ್ತು ಅದಕ್ಕೆ ತಕ್ಕ ಚಿಲ್ಲರೆ ಕೊಡೋದು ಗೊತ್ತಿರಬೇಕಲ್ಲವಾ, ಅದಕ್ಕಾದರೂ ನೀನು ಕಲಿಯುವುದು ಬೇಡವಾ?' ಎಂದರು. ಅದಕ್ಕೆ ಅರುಣ್ 'ನನಗೆ ಗೊತ್ತು' ಎಂದ. 'ಹಾಗಾದರೆ ಹೇಳು ಆಟೋ ಚಾರ್ಜ್ 25 ಆಗಿದೆ. ನಾನು 100 ರೂಪಾಯಿ ಕೊಡುತ್ತೇನೆ, ನೀನು ಎಷ್ಟು ಹಣ ನನಗೆ ವಾಪಸ್ಸು ಕೊಡುತ್ತೀಯಾ?' ಅರುಣ್ ಬಳಿ ಉತ್ತರವಿರಲಿಲ್ಲ. ನಂತರ 'ನಾನು ಆಟೋ ಓಡಿಸೋಲ್ಲ. ಹೂವು ಮಾರುತ್ತೇನೆ'. ಎಂದ. ಅದಕ್ಕೆ ಮರುಪ್ರಶ್ನೆಯಾಗಿ ಅನುಕೂಲಗಾರರು 'ಒಂದು ಮೊಳ ಹೂವಿಗೆ ಎಷ್ಟಿರುತ್ತದೆ? ಹತ್ತು ಮೊಳ ಹೂವಿಗೆ ಎಷ್ಟಾಗುತ್ತದೆ?' ಎಂದರು. ಆಗ ಅರುಣ್ ಸ್ವಲ್ಪ ಆಲೋಚನೆ ಮಾಡತೊಡಗಿದ. ಅಷ್ಟಕ್ಕೆ ನಿಲ್ಲಿಸಿ ಅನುಕೂಲಗಾರರು ಮುನ್ನಡೆದರು. ಮರುದಿನ ಎಲ್ಲರೂ ಡ್ರಾಯಿಂಗ್ ಮಾಡುವಾಗ ತಾನೂ ಮಾಡುತ್ತೇನೆ ಎಂದು ಬಂದ. 12 ವರ್ಷಗಳಾದರೂ ಪೆನ್ಸಿಲ್ ಹಿಡಿಯದ ಅರುಣ್

ಮೊದಲ ಬಾರಿಗೆ ಕ್ರೆಯಾನ್ ಹಿಡಿದು ಬಣ್ಣ ಹಚ್ಚಲು ಆರಂಭಿಸಿದ್ದ. ಎಲ್ಲರೂ ಮುಗಿಸಿದರೂ ಬಣ್ಣ ಹಚ್ಚುವುದರಲ್ಲಿ ಅವನು ತಲ್ಲೀನನಾಗಿದ್ದ. ಆ ದಿನದ ಅರುಣ್‌ನ ವರ್ತನೆ ಎಲ್ಲರನ್ನೂ ಆಶ್ಚರ್ಯಗೊಳಿಸಿತ್ತು. ಅಂದಿನಿಂದ ಅರುಣ್ ತರಗತಿಯೊಳಗೆ ಬರಲು ಆರಂಭಿಸಿದ. ಆದರೆ ಒಬ್ಬ ಅನುಕೂಲಗಾರರ ತರಗತಿಯಲ್ಲಿಯೇ ಇರುತ್ತಿದ್ದ. ಇಡೀ ದಿನ ಡ್ರಾಯಿಂಗ್ ಮಾಡುವುದೇ ಅವನ ಕೆಲಸವಾಯಿತು. ಅದನ್ನು ಬಿಟ್ಟು ಬೇರೇನೂ ಮಾಡಲು ಇಚ್ಛಿಸುತ್ತಿರಲಿಲ್ಲ. ಅನುಕೂಲಗಾರರು ಅವನು ಬರೆಯುತ್ತಿದ್ದ ಚಿತ್ರಗಳ ಹೆಸರು ಮತ್ತು ಸಂಖ್ಯೆಗಳನ್ನು ಬರೆಯುವುದರೊಂದಿಗೆ ಭಾಷೆ ಮತ್ತು ಗಣಿತ (ಉದ್ದ, ಅಗಲ, ಮಿ.ಮೀ, ಸೆಂ.ಮೀ., ಇತ್ಯಾದಿ) ಕಲಿಸುವ ಪ್ರಯತ್ನ ಮಾಡುತ್ತಿದ್ದರು. ಕೆಲವೇ ದಿನಗಳಲ್ಲಿ ಅವನ ಚಿತ್ರ ಬಿಡಿಸುವ ಕೌಶಲ ಎಷ್ಟು ಸುಧಾರಿಸಿತ್ತೆಂದರೆ ಅವನೊಂದು ದೊಡ್ಡ ಹಡಗಿನ ಚಿತ್ರ ಬಿಡಿಸಿ ಅದರಲ್ಲಿ ತನ್ನ ಸ್ನೇಹಿತರ ಮತ್ತು ಅನುಕೂಲಗಾರರ ಚಿತ್ರವನ್ನು ಸೇರಿಸಿದ್ದ. ಆದರೆ ಒಂದು ದಿನ ಇದ್ದಕ್ಕಿದ್ದ ಹಾಗೆ ಶಾಲೆಗೆ ಬರುವುದನ್ನು ನಿಲ್ಲಿಸಿದ. ಬೆಳವಣಿಗೆಯ ಹಾದಿಯಲ್ಲಿದ್ದ ಮಗು ಬಾರದಾಗಿ ಪ್ರಯತ್ನಗಳು ವ್ಯರ್ಥವಾಯಿತಲ್ಲಾ ಎಂಬ ಬೇಸರ ಅನುಕೂಲಗಾರರಿಗಾಯಿತು. ಇದೊಂದು ಜೆ.ಕೆ.ಪಿ.ಯ ಬಹುದೊಡ್ಡ ಸಮಸ್ಯೆ. ಮಕ್ಕಳು ಮಧ್ಯದಲ್ಲಿಯೇ ಶಾಲೆ ಬಿಡುತ್ತಿದ್ದು, ಹೊಸ ಮಕ್ಕಳು ಬರುವುದು ನಿರಂತರವಾಗಿ ಇದ್ದುದರಿಂದ ಅಂದುಕೊಂಡಂತಹ ಕಲಿಕಾ ಫಲಿತಾಂಶಗಳನ್ನು ತಲುಪಲು ಸಾಕಷ್ಟು ಬಾರಿ ಸಾಧ್ಯವಾಗುತ್ತಿರಲಿಲ್ಲ.

## ಮೇಲಿನ ನಿದರ್ಶನಗಳಿಂದ ಕಂಡುಕೊಂಡ ಪ್ರಮುಖ ಅಂಶಗಳು

ಮೊದಲನೆಯ ಶಾಲಾ ಸನ್ನಿವೇಶದಲ್ಲಿ ಮಕ್ಕಳೇ ತಮ್ಮ ಕಲಿಕೆಯ ಮುಖ್ಯ ಪಾತ್ರಧಾರಿಗಳಾಗಿದ್ದರು. ಶಿಕ್ಷಕಿಯ ಪಾತ್ರ ಮಕ್ಕಳ ಕಲಿಕೆಗೆ ಸನ್ನಿವೇಶವನ್ನು ಸೃಷ್ಟಿಸಿಕೊಡುತ್ತಾ, ಕಲಿಕೆಯನ್ನು ಸರಾಗವಾಗಿರಲು ಅನುಕೂಲ ಮಾಡಿಕೊಡುವುದಾಗಿತ್ತು. ಇದೊಂದು ರೀತಿಯಲ್ಲಿ ಶಿಕ್ಷಕಿ ಅವಲಂಬಿತ ತರಗತಿ ಪ್ರಕ್ರಿಯೆಯನ್ನು ಮೀರಿ ಮಕ್ಕಳನ್ನು ಸ್ವಯಂ ನಿರ್ದೇಶಿತ ಕಲಿಕಾದಾರರಾಗುವೆಡೆ ಕೊಂಡೊಯ್ಯುತ್ತಿತ್ತು. ಮಕ್ಕಳು ಶಿಕ್ಷಕಿಯ ಮೇಲೆ ಬಹಳ ಕಡಿಮೆ ಅವಲಂಬಿತರಾಗಿದ್ದರೂ ಶಿಕ್ಷಕಿಯ ಪಾತ್ರ ಮಹತ್ವವನ್ನು ಪಡೆದುಕೊಂಡಿತ್ತು. ಇನ್ನೂ ಮಿಶ್ರ ವಯೋಮಾನದಲ್ಲಿ ಮಕ್ಕಳು ಕಲಿಯುತ್ತಿದ್ದ ಪರಿಸರವು ಒಂದೆಡೆ ಚಿಕ್ಕ ಮಕ್ಕಳು ದೊಡ್ಡ ಮಕ್ಕಳನ್ನು ನೋಡಿ ಸಾಕಷ್ಟು ವಿಚಾರಗಳನ್ನು ಕಲಿತುಕೊಳ್ಳಲು ಅನುವು ಮಾಡಿಕೊಡುತ್ತಿದ್ದರೆ, ದೊಡ್ಡ ಮಕ್ಕಳು ಚಿಕ್ಕ ಮಕ್ಕಳನ್ನು ಹೇಗೆ ನಿರ್ವಹಿಸುವುದು, ಅವರನ್ನು ಹೇಗೆ ಅರ್ಥಮಾಡಿಸುವುದು, ಅವರ ಸಾಮರ್ಥ್ಯವನ್ನು ಅರ್ಥೈಸಿಕೊಂಡು ತಕ್ಕ ರೀತಿಯಲ್ಲಿ ಪ್ರತಿಸ್ಪಂದಿಸುತ್ತಾ ಅವರ ಕಲಿಕೆಗೆ ಪೂರಕವಾದಂತಹ ಪಾತ್ರವನ್ನು ನಿರ್ವಹಿಸುತ್ತಿದ್ದರು. ಈ ವಯೋಮಾನದ ಮಕ್ಕಳು ಈ ನಿರ್ದಿಷ್ಟ ವಿಷಯವನ್ನು ಮಾತ್ರವೇ ಕಲಿಯಬೇಕೆಂಬ ಪೂರ್ವ ನಿರ್ಧಾರಿತ ಪಠ್ಯಕ್ರಮವನ್ನು ಮೀರಿತ್ತು. ಮಕ್ಕಳೇ ಮಕ್ಕಳನ್ನು ನಿರ್ವಹಿಸುತ್ತಿದ್ದ ಈ ಪರಿಸರದಲ್ಲಿ ಶಿಕ್ಷಕಿಗೆ ನಿರ್ವಹಣಾ ಕಾರ್ಯದಲ್ಲಿ ಸಾಕಷ್ಟು ಸಮಯ ವ್ಯಯ ಮಾಡುವುದರ ಹೊರತಾಗಿ ಇತರೆ

(ಉದಾಹರಣೆಗೆ ಕಲಿಕಾ ಪ್ರಕ್ರಿಯೆಗೆ ಯೋಜನೆ ರೂಪಿಸಿಕೊಳ್ಳಲು, ಸಂಪನ್ಮೂಲಗಳನ್ನು ಸಂಗ್ರಹಿಸಿಟ್ಟುಕೊಳ್ಳಲು, ಇತ್ಯಾದಿ) ಕಾರ್ಯಗಳಿಗೆ ಬಳಸಿಕೊಳ್ಳಲು ಸಾಧ್ಯಗೊಳಿಸುತ್ತಿತ್ತು.

ಅದೊಂದು ಸುಂದರವಾದ, ಸ್ಪರ್ಧಾತ್ಮಕವಲ್ಲದ, ಸಹಭಾಗಿತ್ವದಿಂದ ಕೂಡಿದ ಸಮನ್ವಯ ಮಾದರಿಯ ಕಲಿಕಾ ಪರಿಸರವಾಗಿತ್ತು. ಶಿಕ್ಷಕಿಯೂ ಒಳಗೊಂಡಂತೆ ಎಲ್ಲರೂ ಪರಸ್ಪರ ಸಹ-ಕಲಿಕಾದಾರರಾಗಿದ್ದರು, ಒಬ್ಬರ ಕಲಿಕೆಗೆ ಇನ್ನೊಬ್ಬರು ಪ್ರೋತ್ಸಾಹಕರಾಗಿದ್ದರು. ಬೇಕಾದಾಗ ಶಿಕ್ಷಕಿಯ ಬೆಂಬಲ ಪಡೆಯುತ್ತಿದ್ದರು, ಎದುರಾದ ಪ್ರಶ್ನೆಗಳಿಗೆ ಶಿಕ್ಷಕಿ ಅಥವಾ ಸಹಪಾಠಿಗಳೊಂದಿಗೆ ಸಮಾಲೋಚಿಸಲು ಸಾಕಷ್ಟು ಸ್ವಾತಂತ್ರ್ಯ ಹೊಂದಿದ್ದರು. ಅದರೆ ಯಶವಂತನೇನಾದರೂ ಇಂತಹ ಪ್ರಕ್ರಿಯೆ ಹಾಗೂ ಇಂತಹ ಮನೋವೃತ್ತಿಯನ್ನು ಹೊಂದಿರದ ಶಿಕ್ಷಕಿಯ ತರಗತಿಯಲ್ಲಿ ಇದ್ದಿದ್ದರೆ ಅವನ ಸ್ಥಿತಿ ಏನಾಗಿರುತ್ತಿತ್ತೋ ಊಹಿಸಿಕೊಳ್ಳಲು ಕಷ್ಟವಾಗುತ್ತದೆ. ಒಂದು ವೇಳೆ ಈ ಮಗುವು ಶಿಕ್ಷಣದ ಸಾಂಪ್ರದಾಯಿಕ ದೃಷ್ಟಿಕೋನವುಳ್ಳ ಶಿಕ್ಷಕಿಯ ತರಗತಿಯಲ್ಲಿ ಏನಾದರೂ ಇದ್ದಿದ್ದರೆ ಬಹುಶಃ ಇವನೊಬ್ಬ ಎಡಿಹೆಚ್‌ಡಿ (Attention deficit hyperactivity disorder (ADHD) ಸಮಸ್ಯೆಗೆ ಒಳಗಾಗಿರುವ ಹಾಗೂ ಶಿಕ್ಷಕರಿಗೆ ಮತ್ತು ಸಹಪಾಠಿಗಳಿಗೆ ತಲೆನೋವಾಗಿ ಪರಿಣಮಿಸಿರುವ ಮಗುವೆಂದೂ ಬಿಂಬಿಸಲಾಗುತ್ತಿತ್ತು ಹಾಗೂ ಅವನನ್ನು ಅನೇಕ ಸಮಸ್ಯೆಗಳಿಗೆ ತಳ್ಳಲ್ಪಟ್ಟು ಆರಂಭದಲ್ಲಿಯೇ ಕಲಿಕಾ ಆಸಕ್ತಿಯನ್ನು ಕಳೆದುಕೊಳ್ಳುವಂತಹ ಸಂಭವವೂ ಇರುತ್ತಿತ್ತು.

ಆದರೆ ಎರಡನೆಯ ಉದಾಹರಣೆಯಲ್ಲಿ ಮಗುವಿನ ಅವಶ್ಯಕತೆ, ಕಲಿಕಾ ಶೈಲಿ ಹಾಗೂ ಆಸಕ್ತಿಯ ಕ್ಷೇತ್ರವನ್ನು ಅರ್ಥಮಾಡಿಕೊಳ್ಳುವಲ್ಲಿ ಶಿಕ್ಷಕಿ ವಿಫಲಗೊಂಡಿದ್ದರು. ಮಗುವಿನ ಮೇಲೆ ಹಲವಾರು ನಕಾರಾತ್ಮಕ ಧೋರಣೆಗಳನ್ನು ಬೆಂಬಲಿಸುವ ಹಾಗೂ ಮಗು ದಡ್ಡನೆಂಬ ಹಣೆಪಟ್ಟಿ ಕಟ್ಟುವ ಶಿಕ್ಷಕಿಯ ಮನೋವೃತ್ತಿಯು ಉಳಿದ ಮಕ್ಕಳ ಮೇಲೂ ಪ್ರಭಾವ ಬೀರಿ ಮಗುವನ್ನು ನಿರ್ಲಕ್ಷ್ಯಕ್ಕೆ ಒಳಗಾಗುವಂತೆ ಮಾಡಿತ್ತು. ಇನ್ನೊಂದೆಡೆ ಮಗುವಿನ ಮಾನಸಿಕ ಸ್ಥಿತಿಯ ಮೇಲೆ ಭಾರಿ ಪ್ರಭಾವ ಉಂಟಾಗುವ ಸಾಧ್ಯತೆ ಇದ್ದು, ಕಲಿಕೆಯಲ್ಲಿಯೇ ಆಸಕ್ತಿ ಕಳೆದುಕೊಂಡು ಅದ್ಭುತ ವ್ಯಕ್ತಿಯಾಗಿ ಹೊರಹೊಮ್ಮುವ ಅವಕಾಶವನ್ನು ಕಳೆದುಕೊಳ್ಳುವ ಸಂಭವವೂ ಇತ್ತು.

ಮೂರನೇ ಉದಾಹರಣೆಯಲ್ಲಿ ಶಿವಕುಮಾರ ಶಿಕ್ಷಕರು ಮಕ್ಕಳನ್ನೇ ತಮ್ಮ ಕಲಿಕೆಗೆ ಜವಾಬ್ದಾರರಾಗುವಂತಹ ಪರಿಸರವನ್ನು ನಿರ್ಮಿಸಿದ್ದರು. ಮಕ್ಕಳು ಗುಂಪಾಗಿ ಕೊಟ್ಟಿರುವ ಕಾರ್ಯದ ಅನ್ವೇಷಣೆಯನ್ನು ಮಾಡಿದರು. ಇದರಿಂದ ಅವರಲ್ಲಿ ಮಾತನಾಡುವ, ಪ್ರಶ್ನಿಸುವ, ಹುಡುಕುವ, ಮಾಹಿತಿಯನ್ನು ಬರವಣಿಗೆ ರೂಪದಲ್ಲಿ ಸಂಗ್ರಹಿಸುವ, ಇತರರೊಂದಿಗೆ ಹಂಚಿಕೊಳ್ಳುವ, ತಂಡವಾಗಿ ಕಾರ್ಯನಿರ್ವಹಿಸುವ – ಹೀಗೆ ಅನೇಕ ಸಾಮರ್ಥ್ಯಗಳು ಒತ್ತಡರಹಿತವಾಗಿ ಬೆಳವಣಿಗೆ ಆಗುತ್ತಿರುವುದನ್ನು ಕಾಣಬಹುದಾಗಿತ್ತು.

ಇನ್ನೂ ಯಾವುದೇ ಅನುಭವವೇ ಇಲ್ಲದ ಅನುಕೂಲಗಾರರ ಗುಂಪೊಂದು ಸಂದರ್ಭ-ಸನ್ನಿವೇಶವನ್ನು ಅರ್ಥ ಮಾಡಿಕೊಳ್ಳುತ್ತಾ, ಅದಕ್ಕೆ ಅನುಗುಣವಾದ ಪರಿಕಲ್ಪನೆಯನ್ನು ಆಯ್ದುಕೊಳ್ಳುತ್ತಲೇ ಮಕ್ಕಳ ಜೀವನದೊಂದಿಗೆ ಪ್ರಸ್ತುತತೆ ಇರುವಂತಹ ಶಿಕ್ಷಣ ಒದಗಿಸುವಲ್ಲಿ ತೊಡಗಿಸಿಕೊಂಡುದನ್ನು ಕಾಣಬಹುದಾಗಿತ್ತು. ಜೊತೆಗೆ ಇಲ್ಲಿ

ಶಿಕ್ಷಕರು – ವಿದ್ಯಾರ್ಥಿಗಳು ಎಂಬ ಔಪಚಾರಿಕ ಅಂತರವೇನೂ ಇರಲಿಲ್ಲ. ಯಾವುದೇ ಅನುಭವ ಅಥವಾ ತರಬೇತಿ ಇಲ್ಲದ ಅನುಕೂಲಗಾರರು ಬಹುಶೇಕ ಮಕ್ಕಳ ಜೀವಪಕ್ಕೆ ಅನುಕೂಲವಾಗುವಂತಹ ಪರಿಕಲ್ಪನೆಗಳನ್ನೇ ಕಲಿಯಲು ಅನುವು ಮಾಡಿಕೊಡುತ್ತಿದ್ದರು. ತಾವೇನು ಎಲ್ಲಾ ವಿಷಯಗಳಲ್ಲಿಯೂ ಪರಿಣತರಲ್ಲದಿದ್ದರೂ, ಅನುಕೂಲ ಮಾಡಿ ಕೊಡಲಾಗುತ್ತಿರುವ ಪರಿಕಲ್ಪನೆಯ ಕುರಿತು ನಿಖರ ಹಾಗೂ ಹೆಚ್ಚಿನ ಮಾಹಿತಿಗಾಗಿ ಬಾಹ್ಯ ಸಂಪನ್ಮೂಲ ವ್ಯಕ್ತಿಗಳನ್ನು ಬಳಕೆ ಮಾಡಿಕೊಳ್ಳುವುದರ ಮೂಲಕ ಮಕ್ಕಳ ಕಲಿಕಾ ಅನುಭವವನ್ನು ಸಮೃದ್ಧಗೊಳಿಸುತ್ತಿದ್ದರು.

ಈ ಮೂರೂ ನಿದರ್ಶನಗಳು ಶಿಕ್ಷಣದಲ್ಲಿ ಶಿಕ್ಷಕರ ಪಾತ್ರ ಎಷ್ಟು ನಿರ್ಣಾಯಕ ಎಂಬುದನ್ನು ತೋರಿಸಿಕೊಡುತ್ತವೆ.

## ಒಳನೋಟಗಳು

ಈ ಮೇಲಿನ ನಿದರ್ಶನಗಳು ಯಾವುದೇ ಪೂರ್ವನಿರ್ಧರಿತ ಪಠ್ಯಕ್ರಮವನ್ನು ಇಟ್ಟುಕೊಳ್ಳದೆಯೇ ಸಾಂದರ್ಭಿಕವಾದ ಪರಿಕಲ್ಪನೆಗಳನ್ನು ಆಯ್ಕೆ ಮಾಡಿಕೊಂಡು ಮಕ್ಕಳ ಕಲಿಕಾ ಪ್ರಕ್ರಿಯೆಗೆ ಅನುಕೂಲ ಮಾಡಿಕೊಡಲು ಸಾಧ್ಯವಿದೆ ಎಂಬುದನ್ನು ತಿಳಿಯಪಡಿಸುತ್ತವೆ. ಕಾಡಂಕನಹಳ್ಳಿ ಶಾಲೆಯ ಶಿವಕುಮಾರ ಎಂಬ ಶಿಕ್ಷಕರು ತಮ್ಮ ವಿದ್ಯಾರ್ಥಿಗಳು ಸ್ವತಃ ಅನ್ವೇಷಿಸಿ ಜ್ಞಾನ ಕಟ್ಟಿಕೊಳ್ಳಲು ಅನುಕೂಲ ಮಾಡಿಕೊಡುವುದರ ಮೂಲಕ ತಾವು ಮಗುವಿಗೆ ಸಿದ್ಧ ಉತ್ತರಗಳನ್ನು ನೀಡುವುದಕ್ಕಿಂತಲೂ ಅವರಿಗಿರುವ ಪ್ರಶ್ನೆಗಳಿಗೆ ಉತ್ತರ ಕಂಡುಕೊಳ್ಳುವಂತಹ ಅವಕಾಶಗಳನ್ನು ಒದಗಿಸಿ, ತಮ್ಮ ಬೌದ್ಧಿಕ ಅರಿವನ್ನು ಜಾಗೃತಗೊಳಿಸುವುದನ್ನು ಸಾಧ್ಯಗೊಳಿಸಿದ್ದಾರೆ. ಒಟ್ಟಾರೆಯಾಗಿ ಮಕ್ಕಳು 'ಕಲಿಯುವುದನ್ನು ಹೇಗೆ ಕಲಿಯುವುದು' ಎಂಬುದನ್ನು ಕಲಿಯಲು ಅನುಕೂಲ ಮಾಡಿಕೊಟ್ಟು ತಾವಾಗಿಯೇ ಹೊಸ ವಿಷಯಗಳನ್ನು ಅನ್ವೇಷಿಸಿ ಕಲಿತುಕೊಳ್ಳುವ ಪ್ರಕ್ರಿಯೆಗೆ ಚಾಲನೆ ನೀಡಿದ್ದಾರೆ. ಹಾಗೆಯೇ, ಗೊಡಬನಾಳ ಶಾಲೆಯ ಶಿಕ್ಷಕಿ ಮಕ್ಕಳಿಗೆ ಒಂದು ನಿರ್ದೇಶಿತ ವಾತಾವರಣದಲ್ಲಿ ಪರಸ್ಪರ ಕಲಿಕೆಗೆ ಸಹಕಾರ ಒದಗಿಸುವಂತಹ ಕಲಿಕಾ ಪರಿಸರವನ್ನು ನಿರ್ಮಿಸಿದ್ದರು. ಇನ್ನು ಯಾವುದೇ ತರಬೇತಿಯನ್ನು ಹೊಂದಿರದ ಅನುಕೂಲಗಾರರ ಗುಂಪು ಹದಿಹರೆಯಾವಸ್ಥೆಯಲ್ಲಿದ್ದ ಮಕ್ಕಳು ಏನೆಲ್ಲಾ ಕಲಿಯಬೇಕು ಎಂಬ ಸಾಂದರ್ಭಿಕ ಅಂಶಗಳನ್ನು ಪರಿಗಣಿಸಿ ಅಗತ್ಯ ಕಲಿಕೆಗೆ ಬೆಂಬಲ ನೀಡಿದರು.

ಈ ಎಲ್ಲಾ ಉದಾಹರಣೆಗಳು ಮಕ್ಕಳಲ್ಲಿ ಈಗಾಗಲೇ ಹುದುಗಿರುವ ಜ್ಞಾನವನ್ನು ಮೂಲಾಧಾರವಾಗಿಟ್ಟುಕೊಂಡು ಮಕ್ಕಳ ಜೀವನದೊಂದಿಗೆ ಸಂಪರ್ಕ ಕಲ್ಪಿಸುತ್ತಾ ಮುಂದಿನ ಕಲಿಕೆಗೆ ಅನುಕೂಲ ಮಾಡಿಕೊಡುವುದು ಕಲಿಕಾ ಪ್ರಕ್ರಿಯೆ ನೈಸರ್ಗಿಕವಾಗಿ ಜರುಗಲು ಸಾಧ್ಯವಾಗಿಸುತ್ತದೆ ಎಂಬುದನ್ನು ತೋರಿಸಿಕೊಟ್ಟಿವೆ. ಇದರಿಂದ ತಮಗೆ ಸಂಬಂಧವೇ ಇಲ್ಲದ ಕಲಿಕೆಯನ್ನು ಒತ್ತಾಯಪೂರ್ವಕವಾಗಿ ಕಲಿಯಬೇಕಾದ ಸಂದರ್ಭದಲ್ಲಿ ಆಗುವಂತಹ ಒತ್ತಡದಿಂದ ಮಕ್ಕಳನ್ನು ಕಾಪಾಡಬಹುದು.

ಶಿಕ್ಷಣ ತಜ್ಞ ಜೀನ್ ಪಿಯಾಜೆರವರ ರಚನಾತ್ಮಕವಾದದ ಅನುಸಾರ, ಸಂಜ್ಞಾತ್ಮಕ ಬೆಳವಣಿಗೆಯು ಜೈವಿಕ ಪಕ್ವತೆ ಮತ್ತು ಪರಿಸರದ ಅನುಭವದ ಪರಿಣಾಮದಿಂದ

ಉಂಟಾಗುವ ಮಾನಸಿಕ ಪ್ರಕ್ರಿಯೆಯ ಮರುಸಂಯೋಜನೆಯಾಗಿದೆ. ಮಕ್ಕಳು ಈಗಾಗಲೇ ತಮಗೆ ತಿಳಿದಿರುವ ಜ್ಞಾನ ಮತ್ತು ಪರಿಸರದೊಂದಿಗೆ ತಮ್ಮ ಅನ್ವೇಷಣೆಗಳ ಅನುಭವದಿಂದ ಅವುಗಳ ನಡುವಿನ ವ್ಯತ್ಯಾಸವನ್ನು ಕಂಡುಕೊಳ್ಳುತ್ತಾ, ತಮ್ಮ ಸುತ್ತಲ ಪ್ರಪಂಚದ ಬಗ್ಗೆ ಜ್ಞಾನವನ್ನು ಕಟ್ಟಿಕೊಳ್ಳುತ್ತಾರೆ. ಈ ಹಿನ್ನೆಲೆಯಲ್ಲಿ ನೋಡಿದಾಗ ಕಲಿಕಾ ಪ್ರಕ್ರಿಯೆಯಲ್ಲಿ ಮಗು ಸಕ್ರಿಯ ಭಾಗೀದಾರನಾಗಿ ತನ್ನ ಕಲಿಕೆಗೆ ತಾನೇ ಜವಾಬ್ದಾರನಾಗುವಂತಹ ಮಗು-ಕೇಂದ್ರಿತ ಕಲಿಕಾ ಪರಿಸರವನ್ನು ಸೃಷ್ಟಿ ಮಾಡಿಕೊಡುವುದರಲ್ಲಿ ಶಿಕ್ಷಕನ ಪಾತ್ರ ಬಹುಮುಖ್ಯವಾಗುತ್ತದೆ.

ತಂತ್ರಜ್ಞಾನ ಎಷ್ಟೇ ಬೆಳೆದರೂ ಸಹ ಒಟ್ಟಾರೆ ಮಾನವ ಜೀವನವನ್ನು ಪ್ರಕೃತಿಯಿಂದ ಪ್ರತ್ಯೇಕವಾಗಿ ನೋಡಲು ಸಾಧ್ಯವಾಗದು. ಪ್ರಕೃತಿಯ ನಡುವೆಯೇ ಮಾನವ ಜೀವನ ಕಟ್ಟಿಕೊಳ್ಳುವುದು ಶಿಕ್ಷಣದ ಬಹುಮುಖ್ಯ ಉದ್ದೇಶವಾಗಬೇಕು. ಮಕ್ಕಳಲ್ಲಿ ಪ್ರಕೃತಿಯ ಮಹತ್ವ ಮತ್ತು ಅದರೊಂದಿಗೆ ತನ್ನ ಸಂಬಂಧವನ್ನು ಹಂತ ಹಂತವಾಗಿ ಮನದಟ್ಟು ಮಾಡಿಸುವ ಅಗತ್ಯವಿದ್ದು ಇದರಲ್ಲಿ ಶಿಕ್ಷಕರ ಪಾತ್ರ ನಿರ್ಣಾಯಕವಾದುದಾಗಿದೆ.

ಶಿಕ್ಷಕ ಒಬ್ಬ ಸಂಶೋಧಕನ ಪಾತ್ರವನ್ನು ನಿರ್ವಹಿಸುವುದು ಶಿಕ್ಷಣ ಕ್ಷೇತ್ರದಲ್ಲಿ ಬಹು ಮುಖ್ಯ ಸಂಗತಿ. ತನ್ನ ಸೇವಾವಧಿಯಲ್ಲಿ ಮಕ್ಕಳು, ಕಲಿಕೆ, ಜ್ಞಾನ ಕಟ್ಟಿಕೊಳ್ಳುವಿಕೆಯ ಪ್ರಕ್ರಿಯೆ, ವರ್ತನೆಯಲ್ಲಿ ಆಗುವ ಬದಲಾವಣೆಗಳು ಹೀಗೆ ಸಾಕಷ್ಟು ವಿಚಾರಗಳನ್ನು ಗಮನಿಸಲು ಮತ್ತು ಸಮರ್ಪಕ ಚಟುವಟಿಕೆಗಳನ್ನು ಆಯೋಜಿಸುವಂತಹ ಸೃಜನಾತ್ಮಕ ಅವಕಾಶಗಳು ಒದಗಿಬರುತ್ತವೆ. ಒಬ್ಬ ಶಿಕ್ಷಕನಾಗಿ ಈ ಅವಕಾಶಗಳನ್ನು ಸದುಪಯೋಗ ಪಡಿಸಿಕೊಂಡು ಕಲಿಕಾ ಪ್ರಕ್ರಿಯೆಗೆ ಅನುಕೂಲ ಮಾಡಿಕೊಟ್ಟರೆ ವಿದ್ಯಾರ್ಥಿಗೆ ಆ ಕಲಿಕಾ ಅನುಭವ ಬಹಳ ಪರಿಣಾಮಕಾರಿಯಾಗಿರುತ್ತದೆ.

ಹಾಗೆಯೇ ಶಿಕ್ಷಕನೊಬ್ಬ ಸಂಪನ್ಮೂಲ ವ್ಯಕ್ತಿಯಾಗುವುದು ಮತ್ತು ಅನುಕೂಲಗಾರನಾಗಿರುವುದು ಪ್ರಸಕ್ತ ಕಾಲಮಾನದಲ್ಲಿ ಪ್ರಾಮುಖ್ಯತೆಯನ್ನು ಪಡೆದುಕೊಳ್ಳುತ್ತದೆ. ನಿರ್ದೇಶಿತ ಪರಿಸರದಲ್ಲಿ ಸ್ವಯಂ ಕಲಿಕಾ ಪ್ರಕ್ರಿಯೆಯಲ್ಲಿ ಮಕ್ಕಳು ತೊಡಗಿಕೊಳ್ಳುತ್ತಾ, ಅವಶ್ಯವಾದ ಮಾಹಿತಿ . ಬೇಕಾದಾಗ, ಸಲಹೆಯನ್ನು ಪಡೆಯುವುದಕ್ಕಾಗಿ, ಮಾರ್ಗದರ್ಶನಕ್ಕಾಗಿ ಶಿಕ್ಷಕನ ಸಹಕಾರವನ್ನು ಪಡೆಯುವಂತಹ ಸಂಪನ್ಮೂಲ ವ್ಯಕ್ತಿಯಾಗಿ, ಅನುಕೂಲಗಾರನಾಗಿ ಮಕ್ಕಳಿಗೆ ಲಭ್ಯವಾಗುವುದು ತನ್ನದೇ ಆದ ಪ್ರಯೋಜನವನ್ನು ಹೊಂದಿದೆ.

ಕಲಿಕಾ ಪ್ರಕ್ರಿಯೆಯ ಭಾಗವಾಗಿ ಸಮುದಾಯವನ್ನು ತೊಡಗಿಸುವುದರಲ್ಲಿ ಶಿಕ್ಷಕ ಶಿವಕುಮಾರ ನಿರ್ವಹಿಸಿದ ಪಾತ್ರ ಒಂದೆಡೆ ಇಡೀ ಗ್ರಾಮವೇ ಕಲಿಕಾ ಪರಿಸರವಾಗಿ ಬದಲಾವಣೆಯಾಗುವ ಆರಂಭಿಕ ಹಂತಕ್ಕೆ ಚಾಲನೆ ನೀಡಿತೆಂದೇ ಹೇಳಬಹುದು. ಒಂದು ಗ್ರಾಮವು ಮಗುವಿನ ಅಗತ್ಯ ಮತ್ತು ಅವರ ವಿಚಾರಣೆಗಳಿಗೆ ಸಕಾರಾತ್ಮಕವಾಗಿ ಸ್ಪಂದಿಸುವಂತಹ ವರ್ತನೆಯನ್ನು ಬೆಳೆಸಿಕೊಂಡಲ್ಲಿ ಮಕ್ಕಳಿಗೆ ಪೂರಕ ಕಲಿಕಾ ಪರಿಸರ ವಿಸ್ತರಣೆಗೊಂಡಾಗ ಕಲಿಕಾ ಪ್ರಕ್ರಿಯೆಯ ನೆಲೆಯೂ ವಿಸ್ತಾರಗೊಳ್ಳುತ್ತದೆ. ಈ ನಿಟ್ಟಿನಲ್ಲಿಯೂ ಶಿಕ್ಷಕ ತನ್ನ ಪಾತ್ರವನ್ನು ನಿರ್ಣಯಿಸಿಕೊಳ್ಳಬೇಕಾಗುತ್ತದೆ.

ಮೇಲಿನ ತರಗತಿ ಪ್ರಕ್ರಿಯೆಯ ನಿದರ್ಶನಗಳನ್ನು ಪ್ರಜಾಯತ್ನ ಸಂಸ್ಥೆಯು ರಾಮನಗರ ಜಿಲ್ಲೆಯ ಚನ್ನಪಟ್ಟಣ ತಾಲ್ಲೂಕಿನ ಹಾಗೂ ಚಿತ್ರದುರ್ಗ ಜಿಲ್ಲೆಯ ಚಿತ್ರದುರ್ಗ ತಾಲ್ಲೂಕಿನ ಆಯ್ದ ಶಾಲೆಗಳಲ್ಲಿ ಅನುಷ್ಠಾನಗೊಳಿಸಿರುವ 'ಕಲಿಕಾಯತ್ನ' ಎಂಬ ಕಲಿಕಾವಿಧಾನವನ್ನು ಅಳವಡಿಸಿಕೊಂಡಿರುವ ಶಾಲೆಗಳಲ್ಲಿ ಆಯೋಜಿಸುತ್ತಿದ್ದ ತರಗತಿ ಪ್ರಕ್ರಿಯೆಗಳೊಂದಿಗಿನ ಅನುಭವಗಳಾಗಿವೆ.

**ರೇಖಾ ಚವ್ಹಾಣ್** : ಅರ್ಥಶಾಸ್ತ್ರದಲ್ಲಿ ಸ್ನಾತಕೋತ್ತರ ಪದವೀಧರರು. ಶಾಲೆಯಿಂದ ಹೊರಗುಳಿದ ಮಕ್ಕಳಿಗೆ ಶಿಕ್ಷಣ ಒದಗಿಸಲೆಂದು ತೆರೆಯಲಾಗಿದ್ದ ಮಾಯಾ ಸಂಸ್ಥೆಯ ಜೀವನ ಕೌಶಲ ಪಾಠಶಾಲೆಯಲ್ಲಿ ಕಲಿಕಾ ಅನುಕೂಲಗಾರರಾಗಿ ಮತ್ತು ಅಂತಹ ಮಕ್ಕಳಿಗಾಗಿಯೇ ವಿಶೇಷ ಕಲಿಕಾ ಮಾಡ್ಯೂಲ್ ಸಿದ್ಧಪಡಿಸುವ ತಂಡದ ಸದಸ್ಯೆಯಾಗಿಯೂ ಕಾರ್ಯ ನಿರ್ವಹಿಸಿದ್ದಾರೆ. ಈಗ ಪ್ರಜಾಯತ್ನ ಸಂಸ್ಥೆಯ 'ಕಲಿಕಾಯತ್ನ' ಎಂಬ ವಿನೂತನ ಕಲಿಕಾ ವಿಧಾನ ರೂಪುಗೊಳಿಸುವ ತಂಡದಲ್ಲಿ ಭಾಗಿಯಾಗಿದ್ದು, ಸಂಸ್ಥೆಯ ಅಧ್ಯಯನ ಮತ್ತು ದಾಖಲೀಕರಣ ತಂಡದೊಂದಿಗೆ ತೊಡಗಿಸಿಕೊಂಡಿದ್ದಾರೆ.

*ಸಂಪರ್ಕ :* rekhapratik2008@gmail.com